ಸಂಪುಟ 01 | ಸಂಚಿಕೆ 139 | ಮಂಗಳವಾರ 07 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ಆರೋಗ್ಯ ದಿನ

"ಆರೋಗ್ಯವೇ ಸಂಪತ್ತು" ಎಂದು ನಮಗೆ ತಿಳಿದಿದೆ. ಆದ್ದರಿಂದ, ಪ್ರತಿ ವರ್ಷ ಏಪ್ರಿಲ್ 7 ರಂದು ವಿಶ್ವ ಆರೋಗ್ಯ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ವಿವಿಧ ಕಾರ್ಯಕ್ರಮಗಳು ಮತ್ತು ವ್ಯವಸ್ಥೆಗಳನ್ನು ವಿಶ್ವ ಆರೋಗ್ಯ ಸಂಸ್ಥೆ ನಿರ್ವಹಿಸುತ್ತದೆ. ಇದನ್ನು ಮೊದಲ ಬಾರಿಗೆ 1950 ರಲ್ಲಿ ಆಚರಿಸಲಾಯಿತು.

## ಸುಭಾಷಿತ

ಸದ್ವರ್ತನೆ ಮತ್ತು ವಿನಯದ ಮಾತುಗಳು
ಎಂಥದೇ ಕಠಿಣ ಪರಿಸ್ಥಿತಿಯಲ್ಲೂ ನಮ್ಮನ್ನು
ಪಾರು ಮಾಡಬಲ್ಲವು.

ಸರ್ ಜಾನ್ ವಾಂಬರ್ಗ್

## ಗಿಲ್ಲೆಸೂಗೂರು: ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ತಾತ್ಕಾಲಿಕ ಪಟ್ಟಿ ಪ್ರಕಟ; ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ತಾಲೂಕಿನ ಗಿಲ್ಲೆಸೂಗೂರು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ 2025-26ನೇ ಸಾಲಿಗೆ ಬರುವ ಒಟ್ಟು 13 ಅಂಗನವಾಡಿ ಕಾರ್ಯಕರ್ತೆ ಹಾಗೂ ಒಟ್ಟು 29 ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಈಗಾಗಲೇ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಆದ-ರಂತೆ ಈ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕವಾಗಿ ಆಯ್ಕೆ ಮಾಡಿರುವದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.**

ಆಕ್ಷೇಪಣೆಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಏಪ್ರಿಲ್ 13ರೊಳಗೆ ಸಲ್ಲಿಸಬಹುದಾಗಿದೆ. ಆಯ್ಕೆಯಾದ ಅಭ್ಯರ್ಥಿಗಳ ಕುರಿತು ಆಕ್ಷೇಪಣೆಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಏಪ್ರಿಲ್ 13ರವರೆಗೆ ಕಚೇ-ರಿಯ ಅವಧಿಯೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳು ಕಾರ್ಯಾಲಯ ಗಿಲ್ಲೆಸೂಗೂರು ಆಶಾಪೂರ್ ಕ್ರಾಸ್ ಸ್ಟೇಷನ್ ಏರಿಯಾ ರಾಯಚೂರು ಇಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗಿಲ್ಲೆಸೂಗೂರು ಶಿಶು ಅಭಿವೃದ್ಧಿ ಯೋಜನ ಕಚೇರಿಯನ್ನು ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಗಿಲ್ಲೆಸೂಗೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಒಪ್ಪಂದಕ್ಕೆ ಬನ್ನಿ, ಇಲ್ಲವೇ ಶರಣಾಗಿ :ಇರಾನ್‌ಗೆ ಟ್ರಂಪ್ ಕೊನೆ ಎಚ್ಚರಿಕೆ

**ವಾಷಿಂಗ್ಟನ್: ಒಪ್ಪಂದಕ್ಕೆ ಬನ್ನಿ ಇಲ್ಲವೇ ಶರಣಾಗಿ ಇಲ್ಲದಿದ್ದರೆ ನಾಳೆ ರಾತ್ರಿ ಮತ್ತಷ್ಟು ಮಾರಕ ದಾಳಿ ನಡೆಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಕೊನೆ ಎಚ್ಚರಿಕೆ ನೀಡಿದ್ದಾರೆ. ಅಮೆರಿಕದ ಈ ಬೆದರಿಕೆ ಇರಾನ್‌ನ ಇಂಧನ ಸೌಲಭ್ಯಗಳ ಮೇಲೆ ಪ್ರಮುಖ ದಾಳಿಯನ್ನು ನಡೆಸಬಹುದು ಎಂದು ಅಂದಾಜಿಸಲಾಗಿದೆ. ಈ ದಾಳಿಯಿಂದ ಇಡೀ ದೇಶದ ವಿದ್ಯುತ್ ಸರಬರಾಜಿನಲ್ಲಿ ಅಡ್ಡಿ ಉಂಟಾಗಬಹುದು ಎನ್ನುವ ಭಯ ಉಂಟಾಗಿದೆ.**



ಮಾರ್ಚ್ 26 ರಂದು ಟ್ರಂಪ್ 10 ದಿನಗಳ ಅಂತಿಮ ಎಚ್ಚರಿಕೆ ನೀಡಿದ್ದರು. ನಂತರ, ಭಾನುವಾರ ಏಪ್ರಿಲ್ 4 ರಂದು, ಅವರು ಅಂತಿಮ 48 ಗಂಟೆಗಳ ಎಚ್ಚರಿಕೆಯನ್ನು ನೀಡಿದ್ದಾರೆ. ಹಾರ್ಮುಜ್ ಚೋಕ್ ಪಾಯಿಂಟ್, ಬುಶೆಹರ್ ಪರಮಾಣು ಸ್ಥಾವರ, ದಕ್ಷಿಣ ಪಾರ್ಸ್ ಅನಿಲ ಕ್ಷೇತ್ರ, ಖಾರ್ಕ್ ದ್ವೀಪದ ತೈಲ ಕೇಂದ್ರ, ಅಬದಾನ್ ಸಂಸ್ಕರಣಾಗಾರ, ಬಂದರ್ ಅಬ್ಬಾಸ್ ಸಂಸ್ಕರಣಾಗಾರ, ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿ ನೆಲೆಗಳ ಮೇಲೆ ದಾಳಿ ಮಾಡುವುದಾಗಿ ಅಮೆರಿಕ ಹೇಳಿದೆ. ರಿಯಾದ್ ನಲ್ಲಿರುವ ಸಿಐಎ ಸ್ಟೇಷನ್ ಮೇಲೆ ಇರಾನ್ ದಾಳಿ ನಡೆಸಿದೆ. ಪ್ರಪಂಚದಾದ್ಯಂತದ ಹೆಚ್ಚಿನ ಅಮೇರಿಕನ್ ರಾಜತಾಂತ್ರಿಕ ಪೋಸ್ಟ್‌ಗಳಂತೆ ರಿಯಾದ್‌ನಲ್ಲಿರುವ ಅಮೇರಿಕನ್ ರಾಯಭಾರ ಕಚೇರಿಯು ತನ್ನದೇ ಆದ ವಾಯು ರಕ್ಷಣಾ ವ್ಯವಸ್ಥೆಯನ್ನು ನಿರ್ವಹಿಸುವುದಿಲ್ಲ.

ಒಂದೇ ನಿಮಿಷದ ಅಂತರದಲ್ಲಿ 2 ಡ್ರೋನ್ ದಾಳಿ ನಡೆಸಲಾಗಿದೆ. ಎರಡನೇ ಡ್ರೋನ್ ಮೊದಲ ದಾಳಿಯಿಂದ ಉಂಟಾದ ರಂಧ್ರದೊಳಗೆ ನೇರವಾಗಿ ನುಗ್ಗಿ ಸ್ಫೋಟಿಸಿತು. ದಾಳಿ ಮುಗಿಯುವಷ್ಟರಲ್ಲಿ ರಿಯಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಮೂರು ಮಹಡಿಗಳು ಗಂಭೀರವಾಗಿ ಹಾನಿಗೊಳಗಾಗಿದ್ದವು ಮತ್ತು ಅದರೊಳಗಿನ ಸಿಐಎ ಕಚೇರಿಗೂ ಹೊಡೆತ ಬಿದ್ದಿತ್ತು. ಫೆಬ್ರವರಿ 28ರಂದು ಯುದ್ಧ ಆರಂಭವಾದ ನಂತರ, ಇರಾನ್ ಮಧ್ಯಪ್ರಾಚ್ಯದಲ್ಲಿನ ಅಮೆರಿಕದ ನೆಲೆಗಳು ಮತ್ತು ರಾಯಭಾರ ಕಚೇರಿಗಳ ಮೇಲೆ ತನ್ನ ಅತಿ ವ್ಯಾಪಕ ದಾಳಿಗಳನ್ನು ನಡೆಸಿದೆ. ರಿಯಾದ್ ಮಾತ್ರವಲ್ಲ, ಬಾಗ್ದಾದ್, ದುಬೈ, ಕುವೈತ್ ಮತ್ತು ಇರಾಕ್ ಕುರ್ದಿಸ್ತಾನದ ಎರ್ಬಿಲ್‌ನಲ್ಲಿರುವ ಅಮೆ-ರಿಕ ರಾಯಭಾರ ಕಚೇರಿಗಳನ್ನೂ ಇರಾನಿಯನ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳು ಗುರಿಯಾಗಿಸಿವೆ.

ಆ ದಾಳಿಗಳಲ್ಲಿ ಯಾವುದೂ ಅಮೆ-ರಿಕನ್ ಸಾವುಗಳಿಗೆ ಕಾರಣವಾಗದಿದ್ದರೂ, ಈ ಪ್ರದೇಶದ ಅಮೆರಿಕ ನೆಲೆಗಳ ಮೇಲೆ ತೆಹ್ರಾನ್ ನಡೆಸಿದ ದಾಳಿಗಳು ಏಳು ಅಮೆ-ರಿಕ ಸೈನಿಕರ ಸಾವಿಗೆ, ನೂರಾರು ಮಂದಿಯ ಗಾಯಗಳಿಗೆ ಕಾರಣವಾಗಿದ್ದು, ವಿಮಾನಗಳು ಮತ್ತು ರಕ್ಷಣಾ ಸಾಧನಗಳಿಗೆ ಕೋಟ್ಯಂತರ ಡಾಲರ್ ಮೌಲ್ಯದ ಹಾನಿಯನ್ನುಂಟುಮಾಡಿವೆ. ಇನ್ನೊಂದೆಡೆ ಹಾರ್ಮುಜ್ ಜಲಸಂಧಿಯನ್ನು ಓಪನ್ ಮಾಡಲು ಇರಾನ್‌ಗೆ ನೀಡಿರುವ 48 ಗಂಟೆಗಳ ಗಡುವು ಸೋಮವಾರ ಅಂತ್ಯವಾಗುತ್ತಿದೆ.

ಇದರ ಬೆನ್ನಲ್ಲೇ, ಇರಾನ್‌ಗೆ ಕಠಿಣ ಪದಗಳಲ್ಲಿ ಎಚ್ಚರಿಕೆ ನೀಡಿರುವ ಅಮೆ-ರಿಕ ಅಧ್ಯಕ್ಷ ಡೊನಾಲ್ಡ ಟ್ರಂಪ್, ಪುನಃ ಇರಾನ್‌ಗೆ ಹೊಸ ಬೆದರಿಕೆ ಹಾಕಿ, ವಿದ್ಯುತ್ ಘಟಕಗಳು, ಪವರ್ ಪ್ಲಾಂಟ್‌ಗಳು ಮತ್ತು ದೇಶದ ಪ್ರಮುಖ ಸೇತುವೆಗಳನ್ನು ಏಕಕಾಲದಲ್ಲಿ ಧ್ವಂಸಗೊಳಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಎಬಿಸಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, ಒಪ್ಪಂದ ಮಾಡಿಕೊಳ್ಳದಿದ್ದರೆ, ಅಮೆರಿಕ ಇಡೀ ದೇಶವನ್ನೇ ನಾಶಮಾಡಬಹುದು ಎಂದು ಟ್ರಂಪ್ ಹೇಳಿದ್ದಾರೆ. ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳಂತಹ ಪ್ರಮುಖ ಮೂಲಸೌಕರ್ಯಗಳನ್ನು ಗು-ರಿಯಾಗಿಸಬಹುದು ಎಂದು ಅವರು ಸುಳಿವು ನೀಡಿದ್ದಾರೆ.

# ವಿದ್ಯಾರ್ಥಿಗಳಲ್ಲಿ ವೈಚಾರಿಕ ಪ್ರಜ್ಞೆ ಬೆಳೆಯಲಿ: ಡಾ. ಕೆ. ಖಾದರ್ ಭಾಷಾ ಕರೆ



❏ ನೈಜ್ಯ ದೆಸೆ ನ್ಯೂಸ್

**ತುರ್ವಿಹಾಳ: ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ವೈಚಾರಿಕತೆಯ ಗಟ್ಟಿತನ ಕಡಿಮೆಯಾಗುತ್ತಿದೆ. ಸಾಹಿತ್ಯ ರಚನೆ ಮತ್ತು ಓದಿನ ಮೂಲಕ ವಿದ್ಯಾರ್ಥಿಗಳು ತಮ್ಮಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಸರಕಾರಿ ಪ್ರಥ-ಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ. ಕೆ. ಖಾದರ್ ಭಾಷಾ ಅವರು ಹೇಳಿದರು.**

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತುರ್ವಿಹಾಳ ಹೋಬಳಿ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಕಾರ್ಯಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. ಸಾಹಿತ್ಯದಿಂದ ಇತಿಹಾಸದ ರಕ್ಷಣೆ ಸುತ್ತಮುತ್ತಲಿನ ಸಾಮಾಜಿಕ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿ ಸಾಹಿತ್ಯ ರಚನೆಗೆ ಮುಂದಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದ ಅವರು, "ಸಾಹಿತ್ಯದ ಮೂಲಕ ಮಾತ್ರ ಇತಿಹಾಸವನ್ನು ಜೀವಂತವಾಗಿಡಲು ಸಾಧ್ಯ. ಸಿಂಧೂ ನಾಗರಿಕತೆಯ ಸಂಸ್ಥಾಪಕರೇ ಕನ್ನಡಿಗರು ಎಂಬ ಹೆಮ್ಮೆ ನಮಗಿರಲಿ. ಸಿಂಧನೂರು ತಾಲೂಕಿನ ಶೈಕ್ಷಣಿಕ ಹಿಂದುಳಿಯುವಿಕೆಯ ಹಣೆಪಟ್ಟಿಯನ್ನು ಅಳಿಸಲು ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು" ಎಂದು ಆಶಿಸಿದರು.

ಭಾಷಾಭಿಮಾನ ಮತ್ತು ಉದ್ಯೋಗ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಪ್ರತಿನಿಧಿ ಎಸ್. ದೇವೇಂದ್ರಗೌಡ, ಕನ್ನಡ ಓದಿದರೆ ನೌಕರಿ ಸಿಗುವುದಿಲ್ಲ ಎಂಬ ತಪ್ಪು ಕಲ್ಪನೆಯಿಂದ ವಿದ್ಯಾರ್ಥಿಗಳು ಹೊರಬರಬೇಕು ಎಂದರು. ಪರಭಾಷೆಯ ವ್ಯಾಮೋಹದಲ್ಲಿ ತಾಯ್ನುಡಿಯನ್ನು ನಿರ್ಲಕ್ಷಿಸಬಾರದು ಎಂದು ಎಚ್ಚರಿಸಿದರು. ಜಿಲ್ಲಾ ಮಹಿಳಾ ಪ್ರತಿನಿಧಿ ರಮಾದೇವಿ ಶಂಭೋಜಿ ಮಾತನಾಡಿ, ಸ್ಥಳೀಯ ಇತಿಹಾಸವನ್ನು ಅರಿತು ದತ್ತಿ ಕಾರ್ಯಕ್ರಮಗಳ ಮೂಲಕ ಭಾಷಾ ಪ್ರೇಮ ಬೆಳೆಸುವಂತೆ ಸಲಹೆ ನೀಡಿದರು. ಅಧಿಕಾರ ಹಸ್ತಾಂತರ ಹಾಗೂ ಸನ್ಮಾನ ಕಸಾಪ ತಾಲ್ಲೂಕು ಅಧ್ಯಕ್ಷ ಹೆಚ್. ಎಫ್. ಮಸ್ಕಿ ಅವರು ನೂತನ ಹೋಬಳಿ ಅಧ್ಯಕ್ಷರಾದ ಕನಕರಾಯ ಆನೆಗುಂದಿ ಅವರಿಗೆ ಕನ್ನಡ ಬಾವುಟ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು.

ಇದೇ ಸಂದರ್ಭದಲ್ಲಿ: ಆಧ್ಯಾತ್ಮಿಕ ಚಿಂತಕ ನಾಗಪ್ಪ ಹೂವಿನಭಾವಿ ಅವರಿಗೆ ಸನ್ಮಾನಿಸಲಾಯಿತು. 'ಬಾಳ ಪಯಣ' ಕೃತಿಯು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಆಯ್ಕೆಯಾದ ಹಿನ್ನೆಲೆಯಲ್ಲಿ ಸಾಹಿತಿ ಭೀಮಮ್ಮ ಶಿವಪ್ಪ ಆನೆಗುಂದಿ ಅವರನ್ನು ವಿಶೇಷವಾಗಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹುಸೇನಪ್ಪ ಅಮರಾಪುರ, ಕಸಾಪ ಗೌರವ ಕಾರ್ಯದರ್ಶಿ ಮಹ್ಮದ್ ಮುಸ್ತಫಾ ಸೇರಿದಂತೆ ಹಲವು ಗಣ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿರೂಪಾಕ್ಷಪ್ಪ ಗಚ್ಚಿನಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಲಕ್ಷ್ಮೀಬಾಯಿ ಗುಡೂರು ಕಾರ್ಯಕ್ರಮ ನಿರೂಪಿಸಿದರು, ಆದನಗೌಡ ಕಡಬೂರು ಸ್ವಾಗತಿಸಿ, ಮಣಿಕಂಠ ವಂದಿಸಿದರು.

# ನೀರಿನ ಪ್ರತಿಯೊಂದು ಹನಿಯೂ ಅಮೂಲ್ಯ, ಮಿತವಾಗಿ ಬಳಸಿ:ಆರ್ ಸಿದ್ದನಗೌಡ ತುರುವಿಹಾಳ

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಕುಡಿಯುವ ನೀರಿನ ಕೆರೆಯನ್ನು ನಗರ ಯೋಜನ ಪ್ರಾಧಿಕಾರ ಅಧ್ಯಕ್ಷರಾದ ಆರ್ ಸಿದ್ದನಗೌಡ ತುರವಿಹಾಳ ರವರು ಅಧಿಕಾರಿಗಳೊಂದಿಗೆ ವೀಕ್ಷಿಸಿದರು. ನಂತರ ಪಾಟೀಲ್ ನ್ಯೂಸ್ ಅಲರ್ಟ್ ಸುದ್ದಿಯೊಂದಿಗೆ ಮಾತನಾಡುತ್ತಾ ಪಟ್ಟಣದ ನಾಗರಿಕರು ಕುಡಿಯುವ ನೀರಿನ ಬಳಕೆಯನ್ನು ಆದಷ್ಟು ಸಮರ್ಪಕವಾಗಿ ಮತ್ತು ವ್ಯರ್ಥ ಮಾಡದಂತೆ ಬಳಸಬೇಕು,**




ನೀರಿನ ಪ್ರತಿಯೊಂದು ಹನಿಯೂ ಅಮೂಲ್ಯ ಅದನ್ನು ವ್ಯರ್ಥ ಮಾಡದೆ ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ, ಮುಂದಿನ ದಿನಗಳಲ್ಲಿ ಹೆಚ್ಚುವರಿ ಭೂಮಿ ಅವಕಾಶ ಸಿಕ್ಕರೆ ಮತ್ತೊಂದು ಕುಡಿಯುವ ನೀರಿನ ಕೆರೆ ಮಾಡುವುದಾಗಿ ತಿಳಿಸಿದರು. ಮಸ್ಕಿ ಪಟ್ಟಣವು ದಿನದಿಂದ ದಿನಕ್ಕೆ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪಟ್ಟಣವಾಗಿದ್ದು, ಹೀಗಾಗಿ ನೀರಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಲ್ಲರೂ ನೀರನ್ನು ಉಳಿಸೋಣ ಎಂದು ಹೇಳಿದರು. ಈ ಸಂದರ್ಭದಲ್ಲಿ ಪುರಸಭಾ ಮುಖ್ಯ ಅಧಿಕಾರಿ ನರಸರೆಡ್ಡಿ ಹಾಗೂ ಸಂಬಂಧಿಸಿದ ಅಧಿಕಾರಿಗಳು ಇದ್ದರು.

# ಏ.8 ರಿಂದ ಜಾತ್ರಾ ಮಹೋತ್ಸವ ಹಾಗೂ ಪುರಾಣ ಪ್ರಾರಂಭೋತ್ಸವ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಶಳ್ಳಗಿ ಗ್ರಾಮದಲ್ಲಿ ಶ್ರೀ ಬಸವಂತರಾಯ ಮುತ್ಯಾ ಮತ್ತು ಪರಮಣ್ಣ ಮುತ್ಯಾರವರ 2ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ಪುರಾಣ ಆರಂಭೋತ್ಸವ ಏಪ್ರಿಲ್ 8 ರಿಂದ ಆರಂಭವಾಗಲಿದೆ.**



ದಿ.8-4-2026 ರಿಂದ 20-4-2026 ರವರೆಗೆ ಕಲ್ಬುರ್ಗಿ ಮಹಾ ದಾಸೋಹಿ ಶ್ರೀ ಶರಣಬಸವೇಶ್ವರ ಪುರಾಣವನ್ನು ಪುರಾಣಿಕ ವೇ.ಮೂ. ಬಸಯ್ಯಸ್ವಾಮಿ ಸೋಮಶೇಖರಮಠ(ಯಾಳಗಿ) ಇವರು ನಡೆಸಿಕೊಡುವರು.ಏ.20 ರಂದು ಬೆಳಿಗ್ಗೆ 6:00 ಘಂಟೆಗೆ ಗ್ರಾಮದ ಪ್ರಮುಖ ಬೀದಿಗಳ ಮುಖಾಂತರ ಕುಂಭ ಕಳಸ ವಾದ್ಯ ವೈಭವಗಳೊಂದಿಗೆ ಮೆರವಣಿಗೆ ನಡೆಯುವುದು ನಂತರ ಮಧ್ಯಾಹ್ನ 12 ಘಂಟೆಗೆ ಮಹಾ ಪ್ರಸಾದ ಇರುವುದು ಹಾಗೂ ಸಂಜೆ 4 ಘಂಟೆಗೆ ಧರ್ಮಸಭೆ ಹಾಗೂ ಪುರಾಣ ಮಂಗಲೋತ್ಸವ ಜರುಗುವುದು.ಈ ಸಮಾರಂಭದ ದಿವ್ಯ ಸಾನಿಧ್ಯವನ್ನು ಮಾಗಣಗೇರಿಯ ಷ.ಬ್ರ. ಡಾ.ವಿಶ್ವರಾಧ್ಯ ಶಿವಾಚಾರ್ಯರು, ನಾವದಗಿಯ ಷ.ಬ್ರ. ರಾಜಗುರು ರಾಜೇಂದ್ರ ಒಡೆಯರ ಶಿವಾಚಾರ್ಯರು, ತಾಳಿಕೋಟಿಯ ಶ್ರೀ ಸಿದ್ದಲಿಂಗ ದೇವರು ವಹಿಸಲಿದ್ದು, ಸಾನಿಧ್ಯವನ್ನು ಶ್ರೀ ಮಲ್ಲಯ್ಯ ಹಿರೇಮಠ, ಮಲ್ಲಯ್ಯ ಮಠ ವಹಿಸುವರು. ನೇತೃತ್ವವನ್ನು ಸಣಕೆಪ್ಪ ಮುತ್ಯಾ ದೊಡ್ಡ ಪೂಜಾರಿ, ಶ್ರೀ ನಿಂಗಣ್ಣ ಮುತ್ಯಾ ಸಣ್ಣ ಪೂಜಾರಿ, ಶ್ರೀ ಮುದಕಣ್ಣ ಪೂಜಾರಿ, ಶ್ರೀ ಪರಮಣ್ಣ ಶರಣರು ಹಾಗೂ ಶ್ರೀ ದೊಡ್ಡಪ್ಪಗೌಡ ಹಾದಿಮನಿ ವಹಿಸುವರು. ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ,ಮಾಜಿ ಶಾಸಕ ಸೋಮನಗೌಡ ಬಿ.ಪಾಟೀಲ, ಕೆಪಿಸಿಸಿ ಸದಸ್ಯ ಬಿ.ಎಸ್. ಪಾಟೀಲ(ಯಾಳಗಿ),ಡಾ. ಪ್ರಭುಗೌಡ ಲಿಂಗದಳ್ಳಿ, ಬಸನಗೌಡ ಪಾಟೀಲ (ಎಡಿಯಾಪುರ),ಆನಂದಗೌಡ ದೊಡ್ಡಮನಿ ಸಮಾರಂಭ ಉದ್ಘಾಟಿಸುವರು. ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಕೆ.ನಾಡಗೌಡ ಅಧ್ಯಕ್ಷತೆ ವಹಿಸುವರು. ಕಾಶಿರಾಯ ಚ.ದೇಸಾಯಿ ಗೌರವ ಅಧ್ಯಕ್ಷತೆ ಇರುವುದು. ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ವಿವಿಧ ಸಂಘ-ಸಂಸ್ಥೆಗಳ ಮುಖ್ಯಸ್ಥರು ರಾಜಕೀಯ ದು-ರೀಣರು ಉಪಸ್ಥಿತರಿರುವರು. ಶಳ್ಳಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಜ್ಜರ ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆ ತಿಳಿಸಿದೆ.

# ಜಾಲಹಳ್ಳಿ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಜಾತ್ರೆಯಲ್ಲಿ ರೈತರಿಗೆ ಅನ್ನದಾಸೋಹ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ತಾಲೂಕಿನ ಜಾಲಹಳ್ಳಿಯ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ದೇವಸ್ಥಾನದ ಜಾತ್ರೋತ್ಸವ ಅಂಗವಾಗಿ ನಡೆಯುವ ದನಗಳ ಜಾತ್ರೆಗೆ ಆಗಮಿಸುವ ರೈತರಿಗಾಗಿ ಅನ್ನದಾಸೋಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.**





ಈ ಕಾರ್ಯಕ್ರಮವನ್ನು ಲಕ್ಷ್ಮೀ ರಂಗನಾಥ ಸ್ವಾಮಿ ಸೇವಾ ಸಮಿತಿ, ಗೋವಿಂದ ಸೇವಾ ಸಮಿತಿ, ಊರಿನ ಹಿರಿಯರು, ಮುಖಂಡರು ಹಾಗೂ ಭಕ್ತಾದಿಗಳ ಸಮ್ಮುಖದಲ್ಲಿ ನಡೆಸಲಾಗುತ್ತಿದೆ. ಜಾತ್ರೆಯ ನಂತರ ಐದು ದಿನಗಳ ಕಾಲ ನಡೆಯುವ ಈ ಅನ್ನದಾಸೋಹ ಕಾರ್ಯಕ್ರಮವು ಕಳೆದ ಸುಮಾರು 18 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದ್ದು, ಜಾತಿ ಭೇದವಿಲ್ಲದೆ ಎಲ್ಲಾ ಭಕ್ತರು ಸೇರಿ ಈ ಸೇವೆಯನ್ನು ಮುಂದುವರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಭಕ್ತರಾದ ಶರಣು ಹುಣಸಗಿ ಮಾತನಾಡಿ, ರಥೋತ್ಸವದ ಮರುದಿನದಿಂದ ಐದು ದಿನಗಳವರೆಗೆ ಬೆಳಿಗ್ಗೆಯಿಂದ ರಾತ್ರಿ 9 ಗಂಟೆಯವರೆಗೆ ಎಲ್ಲಾ ರೈತರಿಗೆ ಉಚಿತವಾಗಿ ಊಟದ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಭಕ್ತರಾದ ನಾಗರಾಜ್ ಅವರು ಮಾತನಾಡಿ, ಜಾತ್ರೆಯ ಸಂದರ್ಭದಲ್ಲಿ ಗ್ರಾಮಸ್ಥರು ಒಗ್ಗಟ್ಟಿನಿಂದ ರೈತರಿಗಾಗಿ ಅನ್ನದಾಸೋಹ ನಡೆಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು. ಭಕ್ತರಾದ ಬಸವರಾಜ್ ಮಂಡಲ್ ಗುಡ್ಡ ಅವರು ಮಾತನಾಡಿ, ಪ್ರತಿ ವರ್ಷ ರೈತರಿಗಾಗಿ ಅನ್ನದಾಸೋಹ ಕಾರ್ಯಕ್ರಮವನ್ನು ನಡೆಸುವುದು ಅತ್ಯುತ್ತಮ ಸೇವಾ ಕಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಪತ್ರಕರ್ತರಾದ ಗಿರಿಯಪ್ಪ ಪೂಜಾರಿ ಅವರು ಮಾತನಾಡಿ, ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ಜಾಲಹಳ್ಳಿಯ ತಳವಾರ ಒಣಿಯ ರೈತರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು. ರೈತರಿಗಾಗಿ ಅನ್ನದಾಸೋಹ ಕಾರ್ಯಕ್ರಮ ನಡೆಸುತ್ತಿರುವುದು ಉತ್ತರ ಕರ್ನಾಟಕದ ಜಾಲಹಳ್ಳಿಯಲ್ಲಿ ವಿಶೇಷವಾಗಿದೆ ಎಂದು ಹೇಳಿದರು.

ಇನ್ನೂ ರಂಗನಾಥ ಅವರು ಮಾತನಾಡಿ, ಜಾಲಹಳ್ಳಿಯ ಎಲ್ಲಾ ಜನಾಂಗದವರು ಒಂದಾಗಿ ರೈತರಿಗಾಗಿ ಈ ಸೇವೆ ಸಲ್ಲಿಸುತ್ತಿರುವುದು ಉತ್ತರ ಕರ್ನಾಟಕದಲ್ಲಿ ವಿಶೇಷವಾದ ಉದಾಹರಣೆಯಾಗಿದೆ ಎಂದು ಹೇಳಿದರು. ವಿವಿಧ ಹಳ್ಳಿಗಳಿಂದ ಆಗಮಿಸಿದ ರೈತರು ಕೂಡ ಅನ್ನದಾಸೋಹ ಕಾರ್ಯಕ್ರಮವನ್ನು ಶ್ಲಾಘಿಸಿ ಅಭಿನಂದನೆಗಳನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಊರಿನ ಹಿರಿಯರು, ಯುವಕರು, ರಂಗನಾಥ ಸೇವಾ ಸಮಿತಿಯ ಸದಸ್ಯರು, ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಭಕ್ತಾದಿಗಳು, ಗೋವಿಂದ ಸೇವಾ ಸಮಿತಿ ಸದಸ್ಯರು ಹಾಗೂ ವಿವಿಧ ಹಳ್ಳಿಗಳ ರೈತರು ಹಾಜರಿದ್ದರು.

## ಸಾಹಿತ್ಯ ಸಿಂಚನ

ಕನಸು ಕಂಡ ಮನದೊಳಗೆ
ಹೊಸ ಬೆಳಕು ಮೂಡುವುದು,
ನಂಬಿಕೆಯ ರೆಕ್ಕೆ ಬೆಳೆದು
ಆಕಾಶವನ್ನೇ ತಲುಪುವುದು.

ಸಣ್ಣ ಹೆಜ್ಜೆ ಹಾಕಿದರೂ
ದೊಡ್ಡ ದಾರಿ ತೆರೆದುಕೊಳ್ಳುತ್ತದೆ,
ಧೈರ್ಯದಿಂದ ನಡೆದವನಿಗೆ
ಜಯವೇ ಮುದ್ದು ಕೊಡುತ್ತದೆ.

ಸೋಲು ಬಂದ ಕ್ಷಣದಲ್ಲೂ
ಮನ ಕುಗ್ಗಿಸಿಕೊಳ್ಳಬೇಡ,
ನಾಳೆಯ ಸೂರ್ಯ ಉದಯಕ್ಕೆ
ಇಂದಿನ ಕಷ್ಟವೇ ಬೀಜ.

ಹಗಲು ರಾತ್ರಿ ಪರಿಶ್ರಮದಿಂದ
ಜೀವನ ಗೀತೆಯಾಗುತ್ತದೆ,
ಪ್ರಯತ್ನವೆಂಬ ದೀಪ ಹೊತ್ತರೆ
ಭವಿಷ್ಯ ಚಿನ್ನವಾಗುತ್ತದೆ.

**ಅಮರೇಶ್**

# ಬಾಬು ಜಗಜೀವನ್ ರಾಂ ಹಾಗೂ ಡಾ.ಬಿ.ಆರ್ ಅಂಬೇಡ್ಕರ್ ಈ ದೇಶಕ್ಕೆ ಎರಡು ಕಣ್ಣುಗಳಿದ್ದಂತೆ: ಶಾಸಕ ಬಿ.ಎನ್ ರವಿಕುಮಾರ್.

❑ ನೈಜ್ಯ ದೆಸೆ ನ್ಯೂಸ್

**ಶಿಡ್ಲಘಟ್ಟ: ಮನುಷ್ಯನಿಗೆ ಎರಡು ಕಣ್ಣುಗಳು ಎಷ್ಟು ಮುಖ್ಯನೋ ಈ ದೇಶಕ್ಕೆ ಬಾಬು ಜಗಜೀವನ್ ರಾಮ್ ಮತ್ತು ಅಂಬೇಡ್ಕರ್ ಅವರು ಅಷ್ಟೇ ಮುಖ್ಯ ಎಂದು ಶಾಸಕ ಬಿ.ಎನ್ ರವಿಕುಮಾರ್ ತಿಳಿಸಿದರು.**

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಬಾಬು ಜಗಜೀವನ್ ರಾಮ್ ರವರ 119 ಜಯಂತಿಯನ್ನು ಸಾಂಕೇತಿಕವಾಗಿ ಆಚರಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಯಾವುದೇ ಒಂದು ಜಯಂತಿ ಆಚರಣೆ ಮಾಡಬೇಕಾದರೆ ಆ ಜಯಂತಿಗಳು ನಾಲ್ಕು ಜನಕ್ಕೆ ಒಳ್ಳೆಯದಾಗುವುದಾದರೆ, ಒಳ್ಳೆಯ ನಿಟ್ಟಿನಲ್ಲಿ ಆಚರಣೆ ಮಾಡಬೇಕು. ಸುಮ್ಮನೆ ಪ್ರಚಾರಕ್ಕೆ ಮತ್ತು ತಮ್ಮ ಅನುಕೂಲಕ್ಕೆ ಜಯಂತಿಗಳನ್ನು ಆಚರಣೆ ಮಾಡಬಾರದು. ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾ–ರಿಗಳು ಸಂವಿಧಾನ ಅಡಿಯಲ್ಲಿ ಕೆಲಸ ಮಾಡಿದಾಗ ಯಾವುದೇ ಹೋರಾಟಗಳನ್ನು ಮಾಡಬೇಕಾಗಿರುವುದಿಲ್ಲ ಸಂವಿಧಾನವನ್ನು



ಏನಕ್ಕೆ ಬರೆದಿದ್ದಾರೆ ಎಂಬುದನ್ನು ಅರಿಯಬೇಕು.

ಮೀಸಲಾತಿಗೆ ಸಂಬಂಧಪಟ್ಟಂತೆ ಸಂವಿಧಾನ ಅಡಿಯಲ್ಲಿ ಏನು ಮಾಡಬೇಕು ಅದರಂತೆ ರಾಜಕಾರಣಿಗಳು ಮಾಡಿದರೆ, ಯಾವುದೇ ಹೋರಾಟಗಳು, ನಡೆಯುವುದಿಲ್ಲ, ಪ್ರತಿಭಟನೆಗಳು, ಗಲಾಟೆಗಳು ನಡೆಯುವುದಿಲ್ಲ. ಸಮಾಜ ಸಮಾಜಗಳ ನಡುವೆ ಹೊಡೆದಾಟಗಳು ಇರುವುದಿಲ್ಲ ಅಂಬೇಡ್ಕರ್ ಜಯಂತಿ ಮತ್ತು ಜಗಜೀವನ್ ರಾಮ್ ರವರ ಜಯಂತಿ ಬಹಳ ವಿಜೃಂಭಣೆಯಿಂದ ನಡೆಸಲು ನಿಮ್ಮೆಲ್ಲರ ಸಹಕಾರ ಮುಖ್ಯ ಹಾಗೆಯೇ ನನ್ನ ಸಹಕಾರ, ಬೆಂಬಲ ಸದಾ ಇರುತ್ತದೆ ಎಂದು ತಿಳಿಸಿದರು.

ತಹಸೀಲ್ದಾರ್ ಗಗನ ಸಿಂಧು ಮಾತನಾಡಿ ಬಾಬು ಜಗಜೀವನ್ ರಾವ್ ರವರು ಅವರ ಜೀವನದಲ್ಲಿ ಸಮಾನತೆಗೆ ಹೆಚ್ಚು ಒತ್ತುಕೊಟ್ಟು ಸಮಾಜಕ್ಕೆ ನಾವು ಏನು ಕೊಡಗೆ ನೀಡಬೇಕು ಎಂಬುದನ್ನು ಎಲ್ಲರೂ ತಿಳಿಯಬೇಕು ಹಾಗೂ ಈ ಸಮಾಜದಲ್ಲಿ ಬದಲಾವಣೆಯನ್ನು ತರಲು ಎಲ್ಲರೂ ಯೋಚನೆ ಮಾಡಬೇಕೆಂದು ತಿಳಿಸಿದ್ದಾರೆ ಅದರಂತೆ ನಾವು ಅವರ ತತ್ವ ಆದರ್ಶಗಳನ್ನು ಪಾಲಿಸಿಬೇಕು ಎಂದರು. ಈ ಸಂದರ್ಭದಲ್ಲಿ ಚಿಮುಲ್ ನಿರ್ದೇಶಕರಾದ ಬಂಕ್ ಮುನಿಯಪ್ಪ, ಹುಜುಗೂರು ರಾಮಯ್ಯ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಹೆಚ್ ಜಗದೀಶ್, ಕಾರ್ಯನಿರ್ವಹಣಾಧಿಕಾರಿ ಆರ್ ಹೇಮಾವತಿ, ನಗರಸಭೆ ಪೌರಾಯುಕ್ತೆ ಜಿ ಅಮೃತ, ಬಿಇ ಓ ನರೇಂದ್ರ ಕುಮಾರ್, ವಕೀಲರ ಸಂಘದ ಅಧ್ಯಕ್ಷ ನಾರಾಯಣಸ್ವಾಮಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರವಿ, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಮೇಲೂರು ಮಂಜುನಾಥ್, ಲಕ್ಷ್ಮಣರಾಜು, ಎಲ್ಲಾ ದಲಿತ ಮುಖಂಡರು, ಸಮುದಾಯದವರು ಹಾಗೂ ವಿವಿಧ ಇಲಾಖಾ ಅಧಿಕಾರಿಗಳು ಭಾಗವಹಿಸಿದ್ದರು.

## ಪ್ರಸ್ತುತ ದಿನಮಾನಗಳಲ್ಲಿ ಪ್ರತಿಭೆ ಇದ್ದರೆ ಮಾತ್ರ ಯಶಸ್ಸು ಸಾಧ್ಯ ಡಾ. ಹೈಂದವಿ ಮಧುಸೂದನ್ ಗುಪ್ತಾಜೀ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶಾರದಾ ವಿದ್ಯಾನಿಕೇತನ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಹತ್ತನೇ ತರಗತಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಶಾರದಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಹೈಂದವಿ ಮಧುಸೂದನ್ ಗುಪ್ತಾಜೀ ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರಸ್ತುತ ದಿನಮಾನಗಳಲ್ಲಿ ಪ್ರತಿಭೆ ಇದ್ದರೆ ಮಾತ್ರ ಯಶಸ್ಸು ದೊರೆಯುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತುಗಳನ್ನು ಹೇಳುವುದರ ಜೊತೆಗೆ ಹತ್ತನೇ ತರಗತಿ ನಿಮ್ಮ ಯಶಸ್ಸಿನ ಮೊದಲನೇ ಹಂತ ಹೀಗಾಗಿ ಮುಂದಿನ ದಿನಗಳಲ್ಲಿ ನೀವು ಒಳ್ಳೆಯ ಫಲಿತಾಂಶವನ್ನು ಪಡೆಯುವ ಜೊತೆ ನಿಮ್ಮ ಜೀವನವನ್ನು ಯಶಸ್ವಿಗೊಳಿಸುವ ಹಾಗೂ ನಿಮಗೆ ಇಷ್ಟವಾದ ಕೋರ್ಸ್ ಆಯ್ಕೆ ಮಾಡಿಕೊಂಡು ನಿಮ್ಮ ಮತ್ತು ನಿಮ್ಮ ತಂದೆ ತಾಯಿಯ ಕನಸುಗಳನ್ನು ನನಸು ಮಾಡಿಕೊಂಡು ಜೀವನಕ್ಕೆ ಭದ್ರಬುನಾದಿಯನ್ನು ಹಾಕಿಕೊಳ್ಳಿ ಎಂದು ತಿಳಿಸಿದರು.**




ಶಾರದಾ ಟ್ಯಾಲೆಂಟ್ ಸರ್ಚ್ ಪರೀಕ್ಷೆಯಲ್ಲಿ 245 ವಿದ್ಯಾರ್ಥಿಗಳು ಭಾಗವಹಿಸಿದ್ದರು ಈ ವಿದ್ಯಾರ್ಥಿಗಳಲ್ಲಿ ಪ್ರಥ–ಮ ಬಹುಮಾನ 5000 ರೂ ಗಳನ್ನು ಸುಖದೇವ್ ತಂದೆ ಪರಶುರಾಮ್ ಕಟ್ಟಿಮನಿ ದ್ವಿತೀಯ ಬಹುಮಾನ 3000 ರೂ ಗಳನ್ನು ವಿಶಾಲ್ ತಂದೆ ವೀರಭದ್ರಯ್ಯ ತೃತೀಯ ಬಹುಮಾನ 2000 ರೂ ಗಳನ್ನು ಪ್ರವೀಣ ಪಾಟೀಲ್ ತಂದೆ ಬಸನಗೌಡ ಪಡೆದುಕೊಂಡರು ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಬಿ.ಕಿಶೋರ ಕುಮಾರ್ ಇನ್ನೋರ್ವ ಮುಖ್ಯಸ್ಥರಾದ ಶ್ರೀಮತಿ ಮಂಜುಳಾ ಕಿಶೋರ ಕುಮಾರ್ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಉಮಾಮಹೇಶ್ವರಿ ಮಧುಸೂದನ್ ಗುಪ್ತಾಜೀ ಭಾಗವಹಿಸಿದ್ದರು. ಕಾಲೇಜಿನ ಪ್ರಾಚಾರ್ಯರಾದ ಶ್ರೀ ವೀರಭದ್ರಯ್ಯ ಹಿರೇಮಠ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು ಶ್ರೀ ಮಧುಸೂದನ್ ಗುಪ್ತಾಜೀ ಅವರು ಕಟ್ಟಿ ಬೆಳೆಸಿದ ಈ ಸಂಸ್ಥೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಪಡೆಯುವುದರ ಜೊತೆಗೆ ತಮ್ಮ ಜೀವನವನ್ನು ಕಟ್ಟಿಕೊಂಡಿದ್ದಾರೆ ನಮ್ಮ ಕಾಲೇಜಿನಲ್ಲಿ ವಿಜ್ಞಾನ ವಾಣಿಜ್ಯ ಹಾಗೂ ಕಲಾ ವಿ ಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆಯುವುದರ ಜೊತೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿ–ಕೆಗಳಲ್ಲಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದುಕೊಂಡು ಬಂದಿದ್ದಾರೆ ಹೀಗಾಗಿ ಮುಂದಿನ ನಿಮ್ಮ ಉತ್ತಮವಾದ ಭವಿಷ್ಯವನ್ನು ಕಟ್ಟಿಕೊಳ್ಳಲು ನಮ್ಮ ಕಾಲೇಜಿನಲ್ಲಿ ದಾಖಲಾತಿಯನ್ನು ಪಡೆದು ಕೊಳ್ಳಿರಿ ಎಂದು ಹೇಳುವುದರ ಜೊತೆ ಜೀವನದಲ್ಲಿ ಹಲವು ಕೌಶಲಗಳನ್ನು ಕಲಿಯುವುದರ ಜೊತೆಗೆ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು. ಕಾರ್ಯಕ್ರಮವನ್ನು ಉಪನ್ಯಾಸಕರಾದ ಶ್ರೀ ಮಹಾಂತಗೌಡ ನಿರೂಪಿಸಿದರು ವಿದ್ಯಾರ್ಥಿನಿ ಲಲಿತಾ ಪ್ರಾರ್ಥಿಸಿದರು ಬಂದೇನವಾಜ್ ಸ್ವಾಗತಿಸಿದರು ಹಾಗೂ ಸುರೇಂದ್ರ ಹೊಂದಿಸಿದರು ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು.

# ಮಾನವಿ: ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ತಾತ್ಕಾಲಿಕ ಪಟ್ಟಿ ಪ್ರಕಟ; ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲೆಯ ಮಾನವಿ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯ 06 ಅಂಗನವಾಡಿ ಕಾರ್ಯಕರ್ತೆ ಮತ್ತು 44 ಸಹಾಯಕಿಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಈಗಾಗಲೇ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು.** ಆದ–ರಂತೆ ಈ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕವಾಗಿ ಆಯ್ಕೆ ಮಾಡಿರುವದರಿಂದ



ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಆಕ್ಷೇಪಣೆಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಏಪ್ರಿಲ್ 13ರೊಳಗೆ ಸಲ್ಲಿಸಬಹುದಾಗಿದೆ. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಆಯ್ಕೆ ಸಮಿತಿ ಇವರಿಂದ ಅನುಮೋದನೆಗೊಂಡ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದ್ದು, ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 07 ದಿನ ಕೆಲಸದ ದಿನಗಳ ಕಾಲಾವಕಾಶ ನೀಡಲಾಗಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಾತ್ರ ಖುದ್ದಾಗಿ ಕಚೇರಿಗೆ ಬಂದು ಆಕ್ಷೇಪಣೆ ಸಲ್ಲಿಸಬಹುದಾಗಿದೆ. ಆಕ್ಷೇಪಣೆ ಸಲ್ಲಿಸುವವರು ನಿಖರವಾದ ದಾಖಲಾತಿಯೊಂದಿಗೆಆಕ್ಷೇಪಣೆ ಸಲ್ಲಿಸತಕ್ಕದ್ದು. ದಾಖಲೆ ಇಲ್ಲದಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಮಾನವಿ ಶಿಶು ಅಭಿವೃದ್ಧಿ ಯೋಜನಾಧಿಕಾ–ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಸ್ಕಿ: ಬಿಜೆಪಿ ಕಾರ್ಯಾಲಯದಲ್ಲಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದಲ್ಲಿರುವ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಬಿಜೆಪಿ ಸಂಸ್ಥಾಪನದ ದಿನದ ಅಂಗವಾಗಿ ಬಿಜೆಪಿ ಮಂಡಲ ಅಧ್ಯಕ್ಷರಾದ ಶರಣಬಸವ ಸೊಪ್ಪಿಮಠ ಇವರು ಧ್ವಜಾರೋಹಣವನ್ನು ನೆರವೇರಿಸಿದರು.**

1980ರಲ್ಲಿ ದೇಶಸೇವೆಯ ಸಂಕಲ್ಪದೊಂದಿಗೆ, ನಮ್ಮೆಲ್ಲಾ ಹಿರಿಯ ನಾಯಕರಿಂದ ಸ್ಥಾಪನೆಗೊಂಡ ಪಕ್ಷ, ಅಧಿಕ ಕಾರ್ಯಕರ್ತರ ಅಪ್ರತಿಮ ಪರಿಶ್ರಮದಿಂದ, ವಿಶ್ವದ ಅತಿ ದೊಡ್ಡ ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿದೆ.



ಕಾರ್ಯಕರ್ತರೇ ನಮ್ಮ ಬಲ, ವಿಕಸಿತ ಭಾರತ ನಿರ್ಮಾಣದ ನಮ್ಮ ಗುರಿ ಅಚಲ ಎಂದು ಮಾತನಾಡಿದರು.

ಈ ಸಂದರ್ಭದಲ್ಲಿ ಪುರಸಭಾ ಅಧ್ಯಕ್ಷರಾದ ಸುರೇಶ ಅರಸುರು, ಹಿರಿಯ ಮುಖಂಡರಾದ ಮಲ್ಲಪ ಅಂಕುಸದೊಡ್ಡಿ, ಉಮಕಾಂತಪ್ಪ ಸಂಗನಾಳ, ಡಾ. ಮಲ್ಲಿಕಾರ್ಜುನ ಇತ್ಲಿ, ಪದಾಧಿಕಾರಿಗಳಾದ ಜಿ ವೆಂಕಟೇಶ್ ನಾಯಕ್, ಬಸವರಾಜ್ ವಕೀಲರು, ರಮೇಶ್ ಉದ್ಬಾಳ್, ಪುರಸಭೆ ಸದಸ್ಯರಾದ ಮೌನೇಶ್ ಮುರಾರಿ, ಮಲ್ಲಿಕಾರ್ಜುನ ಬ್ಯಾಳಿ, ಭರತ್ ಕುಮಾರ್, ಕೇಶವಮೂರ್ತಿ, ಬಸವರಾಜ್ ಬುಕ್ಕಣ್ಣ , ಯಮನಪ್ಪ ಬೋವಿ, ಶಿವರಾಜ್ ಪಾಟೀಲ್, ಸಿದ್ದನಗೌಡ ಹಾಗೂ ಇನ್ನಿತರರು ಇದ್ದರು.

## "15 ಲಕ್ಷದ ಕಾಮಗಾರಿ ಕಳಪೆ: 3 ದಿನದ ಗಡುವು ಮುಗಿದರೂ ಕ್ರಮವಿಲ್ಲ; ಪುರಸಭೆ ಅಧಿಕಾರಿಗಳು ಗುತ್ತಿಗೆದಾರನ ಕೈಗೊಂಬೆಗಳೇ?"

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲ್ಲೂಕು ಪುರಸಭೆ ವ್ಯಾಪ್ತಿಯಲ್ಲಿ ಸರ್ಕಾರದ 15 ಲಕ್ಷ ರೂಪಾಯಿಗಳ ಸಾರ್ವಜನಿಕ ಹಣವನ್ನು ಲೂಟಿ ಮಾಡುತ್ತಿರುವ ಗುತ್ತಿಗೆದಾರ ಮತ್ತು ಅವರಿಗೆ ಸಾಥ್ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಸಾರ್ವಜನಿಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.**

15ನೇ ಹಣಕಾಸು ಯೋಜನೆಯಡಿ ಘನತ್ಯಾಜ್ಯ ನಿರ್ವಹಣಾ ಘಟಕದ ಪ್ರವೇಶ ದ್ವಾರ ಮತ್ತು ಫೆನ್ಸಿಂಗ್ ಕಾಮಗಾರಿಯಲ್ಲಿ ನಡೆದಿರುವ ಕಳಪೆ ಮಟ್ಟದ ಕೆಲಸದ ಬಗ್ಗೆ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಶಾಂತ್ ಅವರು ಕಾರ್ಯಾಲಯಕ್ಕೆ ಮೂರು ಬಾರಿ ದೂರು ನೀಡಿದ್ದರೂ, ಅಧಿಕಾರಿಗಳು ಕೇವಲ 'ನೋಟಿಸ್' ನೀಡುವ ನಾಟಕವಾಡಿ ಕೈತೊಳೆದುಕೊಂಡಿದ್ದಾರೆ. ಪುರಸಭೆಯು ಗುತ್ತಿಗೆದಾರ ಶ್ರೀ ಪಿ. ಆಂಜನೇಯ (ಅಪೂರ್ವ ಎಂಟರ್ ಪ್ರೈಸಸ್) ಅವರಿಗೆ




**3ದಿನ ಕಳೆದರು ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸಲು ಅಧಿಕಾರಿಗಳ ಮೀನಮೇಷವೇಕೆ? ..**

ನೀಡಿದ ಅಂತಿಮ ನೋಟಿಸ್‌ನಲ್ಲಿ, ಮೂರು ದಿನಗಳ ಒಳಗೆ ಕಳಪೆ ಕಾಮಗಾರಿಯನ್ನು ಸರಿಪಡಿಸದಿದ್ದರೆ 'ಕಪ್ಪು ಪಟ್ಟಿಗೆ' (Black-list) ಸೇರಿಸುವುದಾಗಿ ಎಚ್ಚರಿಕೆ ನೀಡಲಾಗಿತ್ತು.

ಆದರೆ, ಈ ಗಡುವು ಮುಗಿದು ದಿನಗಳೇ ಉರುಳಿದರೂ ಕಾಮಗಾರಿಯಲ್ಲಿ ಕಿಂಚಿತ್ತೂ ಸುಧಾರಣೆ ಕಂಡಿಲ್ಲ. ನೋಟಿಸ್ ಎನ್ನುವುದು ಕೇವಲ ಕಾಗದದ ಚೂರಾಗಿದ್ದು, ಗುತ್ತಿಗೆದಾರರು ಅದನ್ನು ಕಸದ ಬುಟ್ಟಿಗೆ ಎಸೆದಂತೆ ವರ್ತಿಸುತ್ತಿದ್ದಾರೆ. ಇಷ್ಟಾದರೂ ಪುರಸಭೆಯ ಮುಖ್ಯಾಧಿಕಾರಿಗಳು ಮತ್ತು ಇಂಜಿನಿಯರ್‌ಗಳು ಯಾವುದೇ ಕಠಿಣ ಕ್ರಮ ಕೈಗೊಳ್ಳದೆ ಮೌನಕ್ಕೆ ಶರಣಾಗಿರುವುದು, ಗುತ್ತಿಗೆದಾರ ಮತ್ತು ಅಧಿಕಾರಿಗಳ ನಡುವಿನ 'ಅಪವಿತ್ರ ಮೈತ್ರಿ'ಯನ್ನು ಎತ್ತಿ ತೋರಿಸುತ್ತಿದೆ. ಸಾರ್ವಜನಿಕರ ತೆರಿಗೆ ಹಣವನ್ನು ಹಗಲು ದರೋಡೆ ಮಾಡುತ್ತಿರುವ ಇಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಅಧಿಕಾರಿಗಳು ಏತಕ್ಕೆ ಹಿಂಜರಿಯುತ್ತಿದ್ದಾರೆ? ಮೂರು ದಿನದ ಗಡುವು ನೀಡಿದ ಮೇಲೂ ಕೆಲಸವಾಗದಿದ್ದರೆ ಆ ನೋಟಿಸ್‌ಗೆ ಬೆಲೆ ಎಲ್ಲಿದೆ? ಇದು ವ್ಯವಸ್ಥಿತವಾಗಿ ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವ ತಂತ್ರವಾಗಿದೆ.

ಸರ್ಕಾರದ ಅನುದಾನವನ್ನು ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳುತ್ತಿರುವ ಈ ಜಾಲದ ವಿರುದ್ಧ ಉನ್ನತ ಮಟ್ಟದ ತನಿಖೆಯಾಗಬೇಕು. ತಕ್ಷಣವೇ ಈ ಭ್ರಷ್ಟ ಗುತ್ತಿಗೆದಾರನ ಪರವಾನಗಿ ರದ್ದುಗೊಳಿಸಬೇಕು, ಇಲ್ಲವಾದಲ್ಲಿ ಪುರಸಭೆ ಕಚೇರಿ ಮುಂದೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ತಿಳಿಸಿದ್ದಾರೆ.

# ಬೇಸಿಗೆಯ ಪ್ರಖರ ಬಿಸಿಲಿನಿಂದ ನವಜಾತ ಶಿಶು, ಗರ್ಭಿಣಿ, ಬಾಣಂತಿ, ಸೇರಿದಂತೆ ವಯೋವೃದ್ದರ ಸುರಕ್ಷತೆಯ ಖಾಳಜಿಗೆ ಆದ್ಯತೆ ನೀಡಿ: ಡಾ ಸುರೇಂದ್ರಬಾಬು

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರಸ್ತುತ ವರ್ಷದ ಬೇಸಿಗೆಯು ಪ್ರಖರವಾಗಿರುವ ಸಾಧ್ಯತೆಗಳ ಬಗ್ಗೆ ವರದಿ ಹಿನ್ನಲೆಯಲ್ಲಿ ಮುಖ್ಯವಾಗಿ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ವಯೊವೃದ್ದರ ಕಾಳ–ಜಿಗಾಗಿ ಕುಟುಂಬದ ಸದಸ್ಯರು ಹೆಚ್ಚಿನ ಆದ–್ಯತೆ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ವಿನಂತಿಸಿದರು.**

ರಾಯಚೂರು ನಗರದ ರಾಗಿಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬೇಟಿ ನೀಡಿ ತಾಯಂದಿರೊಂದಿಗೆ ಮಾತನಾಡಿ, ಬಿಸಿಲಿನ ಪ್ರಖರತೆ ಹೆಚ್ಚಿರುವ ಮಧ್ಯಾನ್ಹದ 1 ಗಂಟೆಯಿಂದ 4 ಗಂಟೆಯವರೆಗೆ ಹೆಚ್ಚು ಜಾಗರೂಕರಾಗಿರಬೇಕು. ನವಜಾತ ಶಿಶುವಿನ ಕಾಳಜಿ: ಹೆರಿಗೆ ನಂತರ ಬಾಣಂತಿಯರು ನವಜಾತ ಶಿಶುವಿಗೆ ಮೇಲಿಂದ ಮೇಲೆ ಎದೆ ಹಾಲುಣಿಸುವ ಮೂಲಕ ಶಿಶುವಿನಲ್ಲಾಗುವ ನಿರ್ಜಲೀಕರಣ ತಡೆಯಲು ಸಹಕಾರಿಯಾಗುವುದು. ರೋಗ ನಿರೋಧಕ ಶಕ್ತಿ ವೃದ್ದಿಸಲು 12 ಮಾರಕ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಮರೆಯಬಾರದು. ಗರ್ಭಿಣಿ ಬಾಣಂತಿಯರ ಆರೈಕೆ: ಪ್ರಖರ ಬಿಸಿಲಿನ ಅವಧಿಯಲ್ಲಿ ಆದಷ್ಟು ಮನೆಯ ಹೊರಗೆ ಹೋಗದಂತೆ ಮುತವರ್ಜಿ ವಹಿಸಿ. ಮನೆಯ ಒಳಗೆ ಅಥವಾ ನೆರಳು ಇರುವ ಸ್ಥಳದಲ್ಲಿ ವಿಶ್ರಾಂತಿ ಪಡೆಯಬೇಕಿದೆ. ಆದಷ್ಟು ಮಸಾಲೆಯುಕ್ತ ಪದಾರ್ಥಗಳ ಸೇವನೆ ಕಡಿಮೆ ಇರಲಿ.

ವಯೊವೃದ್ದರು ಹಾಗೂ ದಿರ್ಘಾವಧಿ ಕಾಯಿಲೆಯಿಂದ ಬಳಲುವವರ ಆರೈಕೆ: ಅಧಿಕ ಬಿಸಿಲಿರುವ ಸಮಯದಲ್ಲಿ ಮನೆಯ ಹೊರಗೆ ಹೊಗದಿರಲು ಯೋಚಿಸಿ, ದೈನಂದಿನವಾಗಿ ತೆಗೆದುಕೊಳ್ಳುವ ಮಾತ್ರೆಗಳನ್ನು ಜೊತೆಯಲ್ಲಿ–ರಿಸಿಕೊಳ್ಳಿ, ದ್ರವ ಆಹಾರ ಹೆಚ್ಚು ಸೇವಿಸಬೇಕು. ಚಿಕ್ಕ ಮಕ್ಕಳ ಆರೈಕೆಗೆ ಕಾಳಜಿ ಆಟವಾಡುವ ಮಕ್ಕಳು ಬಿಸಿಲಿನಲ್ಲಿ ನಿಲ್ಲಿಸಿರುವ ವಾಹನ ಮುಟ್ಟದಂತೆ ಜಾಗೃತಿ ವಹಿಸಬೇಕು. ಮಕ್ಕಳು ಅಸುರಕ್ಷಿತ ಆಹಾರ, ಪಾನೀಯ ಸೇವಿಸದಂತೆ ನಿಗಾವಹಿಸಿ. ಓಆರ್‌ಎಸ್ ಜೀವಜಲ ಬಳಕೆಗೆ ಆಧ್ಯತೆ ನೀಡಿ ನಿರ್ಜಲಿಕರಿಣದಿಂದ ದೇಹದ ನೀರಿನ ಅಂಶದ ಜೊತೆಗೆ ಲವಣಾಂಶ ಕಡಿಮೆಯಾಗದಂತೆ ಓಆರ್‌ಎಸ್ ಜೀವ ಜಲ ಪೊಟ್ಟಣ ಸದಾ ಮನೆಯಲ್ಲಿರಲಿ. ಒಂದು ಲೀಟರ್ ನೀರಿಗೆ ಪೊಟ್ಟಣದ ಸಂಪೂರ್ಣ ಪುಡಿ ಹಾಕಿ ದ್ರಾವಣ ಸಿದ್ದಪಡಿಸಿ 24 ಗಂಟೆಯೊಳಗೆ ಬಳಸಬೇಕು. ಇದಲ್ಲದೆ ಲಿಂಬೂ ಪಾನಕ, ಎಳೆನೀರು, ಮಜ್ಜಿಗೆ ಕುಡಿಯಬಹುದು. ಆಹಾರದಲ್ಲಿ ಬೇಳೆ ತಿಳಿ ಬಳಸಿ.



ಅಲ್ಲದೆ ಮುಂಜಾಗ್ರತವಾಗಿ ಜಿಲ್ಲಾ ಎನ್‌ಪೋರ್ಸ್‌ಮೆಂಟ್ ಅಧಿಕಾರಿ ಡಾ ಶಿವಕುಮಾರ ನಾರಾ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಿಲ್ಲಾ ವಿಪತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿಯನ್ವಯ ಆರೋಗ್ಯ ಇಲಾಖೆ ಸಿಬ್ಬಂದಿ ಎಲ್ಲ ಆಸ್ಪತ್ರೆಯ ಬರುವ ಜನತೆಗೆ, ಗ್ರಾಮಗಳಲ್ಲಿ ಹತ್ತಿ ಉಡುಪು ಬಳಕೆ, ಛತ್ರಿ, ಜೊತೆಯಲ್ಲಿ ನೀರು ಇರುವಂತೆ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ.

ವಾಂತಿ ಬೇಧಿ ತಡೆ: ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ–ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ದೀಕರಿಸಿದ ನೀರು ಅಥವಾ ನೀರು ಶುದ್ದೀಕರಣ ಘಟಕದ ನೀರನ್ನು ಕುಡಿಯಲು ಬಳಸಬೇಕು. ಅಲ್ಲದೆ ಊಟದ ಮೊದಲು ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವಿಸಬೇಕು. ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಸುರಕ್ಷಿತ ಆಹಾರ ಮಾತ್ರ ಸೇವಿಸಿ, ಆದಷ್ಟು ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ–್ಯತೆ ನೀಡಿರಿ, ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಸೇವಿಸಬಾರದು, ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಬೇಕು. ಇದಕ್ಕಾಗಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ ನೇತೃತ್ವದಲ್ಲಿ ಅಗತ್ಯ ಜಾಗೃತಿ ನೀಡಲಾಗುತ್ತಿದೆ ಎಂದರು. ಅಲ್ಲದೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಮುಂಜಾಗ್ರತಾ ಔಷಧಿಗಳು ಲಭ್ಯವಿವೆ, ಯಾವುದೇ ತುರ್ತು ಸಂದರ್ಭದಲ್ಲಿ 108 ಕ್ಕೆ ಕರೆ ಮಾಡಿ ಆ?ಯಂಬ್ಯುಲೆನ್ಸ್ ಸದುಪಯೋಗ ಪಡೆಯಲು ತಿಳಿಸಿದರು.

## ನೇಮಕಾತಿ ಪ್ರಕಟಣೆ

ಬಳ್ಳಾರಿ ಡಿಸಿಬಿ ನೇಮಕಾತಿ 2026–82 ಜೂನಿಯರ್ ಅಸಿಸ್ಟೆಂಟ್, ಚಾಲಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಬಳ್ಳಾರಿ ಡಿಸಿಬಿ ನೇಮಕಾತಿ 2026: 82 ಜೂನಿಯರ್ ಅಸಿಸ್ಟೆಂಟ್, ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬಳ್ಳಾರಿ ಜಿಲ್ಲಾ ಸಹಕಾರಿ ಬ್ಯಾಂಕ್ ಲಿಮಿಟೆಡ್, ಜೂನಿಯರ್ ಅಸಿಸ್ಟೆಂಟ್, ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಬಳ್ಳಾರಿ ಡಿಸಿಬಿ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ರ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಬಳ್ಳಾರಿಯಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 06–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 06–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06–ಮೇ–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 06–05–2026 ಅಧಿಕೃತ ವೆಬ್‌ಸೈಟ್: bellarydcc.bank.in

## ಭಿಕ್ಷಾಟನೆಗೆ ಕಡಿವಾಣ ಹಾಕಿ ಸಂಪೂರ್ಣ ನಿಷೇಧಿಸಲು ತಹಶೀಲ್ದಾರರಿಗೆ ದಲಿತ ವಿದ್ಯಾರ್ಥಿ ಪರಿಷತ್ ಮನವಿ

❑ ನೈಜ್ಯ ದೆಸೆ ನ್ಯೂಸ್

**ಸರ್ಕಾರ ಹಲವಾರು ಯೋಜನೆಗಳ ಮೂಲಕ ಮಾನವ ಅಭಿವೃದ್ಧಿಯನ್ನು ಉನ್ನತೀಕರಿಸುವ ಪ್ರಯತ್ನ ನಿರಂತರ ಮಾಡುತ್ತಾ ಬರುತ್ತಿದೆ. ಆದ–ರೂ ಸಮಾಜದಲ್ಲಿ ಇನ್ನೂ ಮಾನವ ಅಭಿವೃದ್ಧಿ ಗ–ರಿಷ್ಟತೆ ಸಾಧಿಸಲು ಸಾಧ್ಯವಾಗಿಲ್ಲ ಜೊತೆಗೆ ಕಾನೂನು ಸಮರ್ಪಕ ಮತ್ತು ಕಟ್ಟುನಿಟ್ಟಾಗಿ ಪರಿಪಾಲನೆ ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಭಿಕ್ಷಾಟನೆ ಎನ್ನುವ ಆತಂಕಕಾರಿ ಬೆಳವಣಿಗೆ ಸಮಾಜದಲ್ಲಿ ಮಿತಿಮೀರಿದೆ ಇದಕ್ಕೆ ಕಡಿವಾಣ ಹಾಕಿ ಎಂದು ದಲಿತ ವಿದ್ಯಾರ್ಥಿ ಪರಿಷತ್ತಿನಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.**

ಕರ್ನಾಟಕ ಭಿಕ್ಷಾಟನೆ ಅಧಿನಿಯಮ ರಾಜ್ಯದಲ್ಲಿ 1975 ರಲ್ಲಿ ಭಿಕ್ಷಾಟನೆಯನ್ನು ಕಾನೂನು ಬಾಯಿರಗೊಳಿಸಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷೆ ಬೇಡುವುದನ್ನು ನಿಷೇಧ ಗೊಳಿಸಿದೆ. ಈ ಕಾಯ್ದೆಯಡಿ ಪೊಲೀಸರು ಭಿಕ್ಷುಕರನ್ನು ಬಂಧಿಸಿ ಪುನರ್ವಸತಿ ಕೇಂದ್ರಗಳಿಗೆ (ನಿರಾಶ್ರಿತರ



ಪರಿಹಾರ ಕೇಂದ್ರ) ಕಳುಹಿಸಲು ಅಧಿಕಾರವನ್ನು ಹೊಂದಿದೆ. ಆದರೆ ಈ ಕಾನೂನು ಸಿಂಧನೂರಿನಲ್ಲಿ ಸಮರ್ಪಕವಾಗಿ ಜಾರಿಯಾಗದಿರುವುದು ತಾಲೂಕು ಆಡಳಿತದ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಪ್ರತಿನಿತ್ಯ ಸಿಂಧನೂರು ನಗರದಲ್ಲಿ ಸಾರ್ವಜನಿಕ ಪ್ರದೇಶಗಳಲ್ಲಿ ನೂರಾರು ಮಕ್ಕಳು, ವೃದ್ಧರು, ಮಹಿಳೆಯರು, ಪುರುಷರು, ಭಿಕ್ಷಾಟನೆ ಮಾಡುತ್ತಿದ್ದು, ಸಿಂಧನೂರಿನ ಸಾರ್ವಜನಿಕ ಬಸ್ ನಿಲ್ದಾಣದಲ್ಲಿ ಖಾಯಂ ಭಿಕ್ಷುಕರು ಕಾಣಸಿಗುತ್ತಿದ್ದು, ಪ್ರಯಾಣಿಕರು ಮುಜುಗರಕ್ಕೆ ಒಳಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಅದರಲ್ಲೂ ಚಿಕ್ಕ ಮಕ್ಕಳು ಪ್ರತಿನಿತ್ಯ ಬೇರೊಂದು ಸ್ಥಳ ಮತ್ತು ಪಟ್ಟಣಗಳಿಂದ ಸಿಂಧನೂರಿಗೆ ಭಿಕ್ಷಾಟನೆಗೆ ಬರುತ್ತಿರುವುದು ನಿರಂತರವಾಗಿ ಕಾಣುತ್ತಿದೆ. ಮಕ್ಕಳು ಶಾಲೆಯಿಂದ ಹೊರಗುಳಿದಿರುವ ಆತಂಕದ ಜೊತೆಗೆ ನಗರದಲ್ಲಿ ಭಿಕ್ಷಾಟನೆ ಮಾಡುವ ಮಕ್ಕಳಿಗೆ ಮಹಿಳೆಯರಿಗೆ, ವೃದ್ಧ–ರಿಗೆ ಪರ್ಯಾಯ ವ್ಯವಸ್ಥೆ ಅಥವಾ ಅನಾಥರು, ನಿರಾಶ್ರಿತರು, ಇದ್ದರೆ ಅವರಿಗೆ ಸೂಕ್ತ ರಕ್ಷಣೆ ನೀಡಿ ಸರ್ಕಾರದಿಂದ ದೊರೆಯುವ ಸೌಕರ್ಯಗಳನ್ನು ಕಲ್ಪಿಸಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಉಚಿತ ವಸತಿ ಮತ್ತು ಶಿಕ್ಷಣವನ್ನು ನೀಡಿ ಸಿಂಧನೂರಿನಲ್ಲಿ ಮುಂದೆಂದು ಯಾರೂ ಭಿಕ್ಷಾಟನೆ ಮಾಡದಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ವೇಳೆ: ತಾಲೂಕು ಅಧ್ಯಕ್ಷ ದುರುಗೇಶ ಕಲಮಂಗಿ, ನರಸಪ್ಪ ಬಡಿಗೇರ್, ಶಿವಪುತ್ರ ಅಮರಾಪುರ, ದೇವರಾಜ, ರಾಜು ಹುಲಗುಂಚಿ, ಇದ್ದರು.

## ಪ್ರಸ್ತುತ ದಿನಮಾನಗಳಲ್ಲಿ ಪ್ರತಿಭೆ ಇದ್ದರೆ ಮಾತ್ರ ಯಶಸ್ಸು ಸಾಧ್ಯ ಡಾ. ಹೈಂದವಿ ಮಧುಸೂದನ್ ಗುಪ್ತಾಜೀ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶಾರದಾ ವಿದ್ಯಾನಿಕೇತನ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಹತ್ತನೇ ತರಗತಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಶಾರದಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಹೈಂದವಿ ಮಧುಸೂದನ್ ಗುಪ್ತಾಜೀ ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರಸ್ತುತ ದಿನಮಾನಗಳಲ್ಲಿ ಪ್ರತಿಭೆ ಇದ್ದರೆ ಮಾತ್ರ ಯಶಸ್ಸು ದೊರೆಯುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತುಗಳನ್ನು ಹೇಳುವುದರ ಜೊತೆಗೆ ಹತ್ತನೇ ತರಗತಿ ನಿಮ್ಮ ಯಶಸ್ಸಿನ ಮೊದಲನೇ ಹಂತ ಹೀಗಾಗಿ ಮುಂದಿನ ದಿನಗಳಲ್ಲಿ ನೀವು ಒಳ್ಳೆಯ ಫಲಿತಾಂಶವನ್ನು ಪಡೆಯುವ ಜೊತೆ ನಿಮ್ಮ ಜೀವನವನ್ನು ಯಶಸ್ವಿಗೊಳಿಸುವ ಹಾಗೂ ನಿಮಗೆ ಇಷ್ಟವಾದ**



**ಕೋರ್ಸ್ ಆಯ್ಕೆ ಮಾಡಿಕೊಂಡು ನಿಮ್ಮ ಮತ್ತು ನಿಮ್ಮ ತಂದೆ ತಾಯಿಯ ಕನಸುಗಳನ್ನು ನನಸು ಮಾಡಿಕೊಂಡು ಜೀವನಕ್ಕೆ ಭದ್ರಬುನಾದಿಯನ್ನು ಹಾಕಿಕೊಳ್ಳಿ ಎಂದು ತಿಳಿಸಿದರು.**

ಶಾರದಾ ಟ್ಯಾಲೆಂಟ್ ಸರ್ಚ್ ಪರೀಕ್ಷೆಯಲ್ಲಿ 245 ವಿದ್ಯಾರ್ಥಿಗಳು ಭಾಗವಹಿಸಿದ್ದರು ಈ ವಿದ್ಯಾರ್ಥಿಗಳಲ್ಲಿ ಪ್ರಥ–ಮ ಬಹುಮಾನ 5000 ರೂ ಗಳನ್ನು ಸುಖದೇವ್ ತಂದೆ ಪರಶುರಾಮ್ ಕಟ್ಟಿಮನಿ ದ್ವಿತೀಯ ಬಹುಮಾನ 3000 ರೂ ಗಳನ್ನು ವಿಶಾಲ್ ತಂದೆ ವೀರಭದ್ರಯ್ಯ ತೃತೀಯ ಬಹುಮಾನ 2000 ರೂ ಗಳನ್ನು ಪ್ರವೀಣ ಪಾಟೀಲ್ ತಂದೆ ಬಸನಗೌಡ ಪಡೆದುಕೊಂಡರು ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಬಿ.ಕಿಶೋರ ಕುಮಾರ್ ಇನ್ನೋರ್ವ ಮುಖ್ಯಸ್ಥರಾದ ಶ್ರೀಮತಿ ಮಂಜುಳಾ ಕಿಶೋರ ಕುಮಾರ್ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಉಮಾಮಹೇಶ್ವರಿ ಮಧುಸೂದನ್ ಗುಪ್ತಾಜೀ ಭಾಗವಹಿಸಿದ್ದರು. ಕಾಲೇಜಿನ ಪ್ರಾಚಾರ್ಯರಾದ ಶ್ರೀ ವೀರಭದ್ರಯ್ಯ ಹಿರೇಮಠ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು ಶ್ರೀ ಮಧುಸೂದನ್ ಗುಪ್ತಾಜೀ ಅವರು ಕಟ್ಟಿ ಬೆಳೆಸಿದ ಈ ಸಂಸ್ಥೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಪಡೆಯುವುದರ ಜೊತೆಗೆ ತಮ್ಮ ಜೀವನವನ್ನು ಕಟ್ಟಿಕೊಂಡಿದ್ದಾರೆ ನಮ್ಮ ಕಾಲೇಜಿನಲ್ಲಿ ವಿಜ್ಞಾನ ವಾಣಿಜ್ಯ ಹಾಗೂ ಕಲಾ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆಯುವುದರ ಜೊತೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದುಕೊಂಡು ಬಂದಿದ್ದಾರೆ ಹೀಗಾಗಿ ಮುಂದಿನ ನಿಮ್ಮ ಉತ್ತಮವಾದ ಭವಿಷ್ಯವನ್ನು ಕಟ್ಟಿಕೊಳ್ಳಲು ನಮ್ಮ ಕಾಲೇಜಿನಲ್ಲಿ ದಾಖಲಾತಿಯನ್ನು ಪಡೆದು ಕೊಳ್ಳಿರಿ ಎಂದು ಹೇಳುವುದರ ಜೊತೆ ಜೀವನದಲ್ಲಿ ಹಲವು ಕೌಶಲಗಳನ್ನು ಕಲಿಯುವುದರ ಜೊತೆಗೆ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು. ಕಾರ್ಯಕ್ರಮವನ್ನು ಉಪನ್ಯಾಸಕರಾದ ಶ್ರೀ ಮಹಾಂತಗೌಡ ನಿರೂಪಿಸಿದರು ವಿದ್ಯಾರ್ಥಿನಿ ಲಲಿತಾ ಪ್ರಾರ್ಥಿಸಿದರು ಬಂದೇನವಾಜ್ ಸ್ವಾಗತಿಸಿದರು ಹಾಗೂ ಸುರೇಂದ್ರ ಹೊಂದಿಸಿದರು ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು.

## ಜಲದುರ್ಗಾ ಕೋಟೆ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಕರವೇ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ಐತಿಹಾಸಿಕ ಪಾರಂಪರೆಗಳಲ್ಲಿ ಪ್ರಮುಖ ಸ್ಥಾನ ಹೊಂದಿರುವ ಜಲದುರ್ಗಾ ಕೋಟೆ ಹಲವು ವರ್ಷಗಳಿಂದ ನಿರ್ಲಕ್ಷ್ಯಕ್ಕೊಳಗಾಗಿ ಹಾಳಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಈ ಕೋಟೆ ಪ್ರಾಚೀನ ಕಾಲದ ವೈಭವವನ್ನು ಸಾರುವ ಮಹತ್ವದ ಸ್ಮಾರಕವಾಗಿದ್ದು, ಇದನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಕರವೇ ಪ್ರವೀಣ್ ಕುಮಾರ್ ಶೆಟ್ಟಿ ಬಣದ ತಾಲೂಕ ಅಧ್ಯಕ್ಷ ಆಂಜನೇಯ ಹೆಚ್ ಭಂಡಾರಿ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು.**

ಈ ಹಿಂದೆ ಪ್ರವಾಸೋದ್ಯಮ



ಇಲಾಖೆಯಿಂದ ಉದ್ಯಾನವನ ಹಾಗೂ ಕಲ್ಲು ಬೆಂಚುಗಳನ್ನು ಅಳವಡಿಸಲಾಗಿತ್ತು. ಆದರೆ ನಿರ್ವಹಣೆ ಕೊರತೆಯಿಂದ ಎಲ್ಲವು ಹಾಳಾಗಿ ಹೋಗಿವೆ. ಪ್ರಸ್ತುತ ಕೋಟೆಯ ಸುತ್ತಮುತ್ತ ಸ್ವಚ್ಛತೆ ಕೊರತೆ, ಸುರಕ್ಷತಾ ವ್ಯವಸ್ಥೆಯ ಅಭಾವ, ಮೂಲಭೂತ ಸೌಕರ್ಯಗಳ ಲೋಪದಿಂದ ಸಾರ್ವಜನಿಕರು ಹಾಗೂ ಪ್ರವಾಸಿಗರು ಭೇಟಿ ನೀಡಲು ಅಸಾಧ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೆಲವು ಬೇಡಿಕೆಗಳು ಕೈಗೊಳ್ಳಬೇಕು. ಕೋಟೆಯ ಸುತ್ತಮುತ್ತ ಸ್ವಚ್ಛತೆ ಹಾಗೂ ಸಂರಕ್ಷಣೆ ಕಾರ್ಯಗಳನ್ನು ತಕ್ಷಣ ಪ್ರಾರಂಭಿಸಬೇಕು.

ಪ್ರವಾಸಿಗರಿಗಾಗಿ ರಸ್ತೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಕೋಟೆಯ ಇತಿಹಾಸವನ್ನು ಪರಿಚಯಿಸುವ ಫಲಕಗಳನ್ನು ಅಳವಡಿಸಬೇಕು. ಸುರಕ್ಷತಾ ದೃಷ್ಟಿಯಿಂದ ಕಾವಲು ಸಿಬ್ಬಂದಿಯನ್ನು ನೇಮಿಸಬೇಕು. ಸ್ಥಳೀಯ ಯುವಕರಿಗೆ ಮಾರ್ಗದರ್ಶಕರಾಗಿ ಉದ್ಯೋಗಾವಕಾಶ ಕಲ್ಪಿಸಬೇಕು. ಜಲದುರ್ಗಾ ಕೋಟೆಯನ್ನು ಅಭಿವೃದ್ಧಿಪಡಿಸಿದರೆ ಸ್ಥಳೀಯ ಆರ್ಥಿಕತೆ ಬೆಳವಣಿಗೆಯಾಗುವುದರ ಜೊತೆಗೆ, ನಮ್ಮ ಐತಿಹಾಸಿಕ ಪರಂಪರೆ ಸಂರಕ್ಷಿತವಾಗುತ್ತದೆ. ಈ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ತಮ್ಮ ಕಾರ್ಯಾಲಯದ ಮುಂದೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು . ಈ ಸಂದರ್ಭದಲ್ಲಿ ತಾಲೂಕ ಉಪಾಧ್ಯಕ್ಷ ಎಲ್ ಭೀಮೇಶ್ ನಾಯಕ್ ಸೇರಿದಂತೆ ಇದ್ದರು .

## ಹಡಪದ ಅಪ್ಪಣನವರ ಗವಿಯಲ್ಲಿ ಹಡಪದ ಅಪ್ಪಣನವರ ಮೂರ್ತಿ ಸ್ಥಾಪನೆ ಆಗಲೇಬೇಕು

❑ ನೈಜ್ಯ ದೆಸೆ ನ್ಯೂಸ್

**ಏಪ್ರಿಲ್ 7 ರಂದು ಬಸವಕಲ್ಯಾಣ ದಲ್ಲಿ ಇರುವ ಬಿ.ಕೆ.ಡಿ.ಬಿ ಆಯುಕ್ತರ ವಿರುದ್ಧ ಬೃಹತ್ ಹೋರಾಟಕ್ಕೆ ಹೆಚ್ಚಿನ ಜನಸಂಖ್ಯೆಯಲ್ಲಿ ಜನತೆ ಭಾಗವಹಿಸಿ. *ಬೀದರ:– ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಬಸವಣ್ಣನವರ ಅರಿವಿನ ಮನೆ ಗವಿಯ ಪಕ್ಕದಲ್ಲಿ ಹಡಪದ ಅಪ್ಪಣ್ಣನವರ ಗವಿಯಲ್ಲಿ ಅವರದ್ದೇ ಮೂರ್ತಿ ಸ್ಥಾಪನೆಯಾಗಬೇಕು ಎಂಬುದು ಸಮಾಜದ ದೀರ್ಘಕಾಲದ ಮತ್ತು ನ್ಯಾಯಸಮ್ಮತವಾದ ಬೇಡಿಕೆಯಾಗಿದೆ.**

ಈ ಕುರಿತ ಇತ್ತೀಚಿನ ಪ್ರಮುಖ ಅಂಶಗಳು ಇಲ್ಲಿವೆ: ವಿವಾದದ ಹಿನ್ನೆಲೆ: ಇತ್ತೀಚೆಗೆ ಹಡಪದ ಅಪ್ಪಣ್ಣನವರ ಗವಿಯಲ್ಲಿ ಅನ್ಯಮೂರ್ತಿಗಳನ್ನು ಸ್ಥಾಪಿಸಲಾಗಿದೆ ಎಂಬ ವಿಷಯ ಸಮಾಜದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಸಮಾಜದ ಎಚ್ಚರಿಕೆ: ಗವಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ಅನ್ಯ ಮೂರ್ತಿಗಳನ್ನು ತಕ್ಷಣವೇ ತೆರವುಗೊಳಿಸಿ, ಅಲ್ಲಿ ಹಡಪದ ಅಪ್ಪಣ್ಣನವರ ಮೂರ್ತಿಯನ್ನೇ ಸ್ಥಾಪಿಸಬೇಕು. ಇಲ್ಲದಿದ್ದರೆ ಇದೇ ಏಪ್ರಿಲ್ 7ರಂದು ಬೆಳಿಗ್ಗೆ 10:30 ನಿಮಿಷಕ್ಕೆ ಬಿಕೆಡಿಬಿ ಆಪೀಸ್ ಎದರುಗಡೆ ಸಮಾಜದ ಬಂಧುಗಳ ಸಮ್ಮುಖದಲ್ಲಿ ಉಗ್ರ ಹೋರಾಟ ಮಾಡಲಾಗುವುದು. ಎಂದು ಬೀದರ ಜಿಲ್ಲೆಯ ಹಾಗೂ ಬಸವಕಲ್ಯಾಣ ತಾಲೂಕು ಹಡಪದ ಅಪ್ಪಣ್ಣ ಸಮಾಜದ ಮುಖಂಡರು ಬಿಕೆಡಿಬಿ




ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಐತಿಹಾಸಿಕ ಮಹತ್ವ: ಬಸವಣ್ಣನವರ ಆಪ್ತ ಒಡನಾಡಿಯಾಗಿದ್ದ ಹಡಪದ ಅಪ್ಪಣ್ಣನವರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಅವರ ತಪೋಭೂಮಿಯಾದ ಈ ಗವಿಯಲ್ಲಿ ಅವರ ಸ್ಮರಣಾರ್ಥ ಮೂರ್ತಿ ಇರುವುದು ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಅತ್ಯಂತ ಅವಶ್ಯಕವಾಗಿದೆ. ಹಡಪದ ಅಪ್ಪಣನವರ ಗವಿಯಲ್ಲಿ ಹಡಪದ ಅಪ್ಪಣನವರ ಮೂರ್ತಿ ಸ್ಥಾಪನೆ ಆಗಲೇಬೇಕು ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಹಡಪದ ಅಪ್ಪಣ್ಣನವರ ಗವಿಯಲ್ಲಿ ಅವರದ್ದೇ ಮೂರ್ತಿ ಸ್ಥಾಪನೆಯಾಗಬೇಕು ಎಂಬುದು ಸಮಾಜದ ದೀರ್ಘಕಾಲದ ಮತ್ತು ನ್ಯಾಯಸಮ್ಮತವಾದ ಬೇಡಿಕೆಯಾಗಿದೆ. ಈ ಕು–ರಿತ ಇತ್ತೀಚಿನ ಪ್ರಮುಖ ಅಂಶಗಳು ಇಲ್ಲಿವೆ: ವಿವಾದದ ಹಿನ್ನೆಲೆ: ಇತ್ತೀಚೆಗೆ ಹಡಪದ ಅಪ್ಪಣ್ಣನವರ ಗವಿಯಲ್ಲಿ ಅನ್ಯಮೂರ್ತಿಗಳನ್ನು ಸ್ಥಾಪಿಸಲಾಗಿದೆ ಎಂಬ ವಿಷಯ ಸಮಾಜದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಸಮಾಜದ ಎಚ್ಚರಿಕೆ: ಗವಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ಅನ್ಯ ಮೂರ್ತಿಗಳನ್ನು ತಕ್ಷಣವೇ ತೆರವುಗೊಳಿಸಿ, ಅಲ್ಲಿ ಹಡಪದ ಅಪ್ಪಣ್ಣನವರ ಮೂರ್ತಿಯನ್ನೇ ಸ್ಥಾಪಿಸಬೇಕು. ಇಲ್ಲದಿದ್ದರೆ ಇದೇ ಏಪ್ರಿಲ್ 7ರಂದು ಉಗ್ರ ಹೋರಾಟ ಮಾಡಲಾಗುವುದು ಎಂದು ಹಡಪದ ಸಮಾಜದ ಮುಖಂಡರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಐತಿಹಾಸಿಕ ಮಹತ್ವ: ಬಸವಣ್ಣನವರ ಆಪ್ತ ಒಡನಾಡಿಯಾಗಿದ್ದ ಹಡಪದ ಅಪ್ಪಣ್ಣನವರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಅವರ ತಪೋಭೂಮಿಯಾದ ಈ ಗವಿಯಲ್ಲಿ ಅವರ ಸ್ಮರಣಾರ್ಥ ಮೂರ್ತಿ ಇರುವುದು ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಅತ್ಯಂತ. ಅವಶ್ಯಕವಾಗಿದೆ.

ಎಂದು ತಿಳಿಸಿದರು, ಈ ಸಂಧರ್ಭದಲ್ಲಿ ಜಿಲ್ಲಾಧ್ಯಕ್ಷರಾದ ದತ್ತಾತ್ರೇಯ ಹಡಪದ ಬಾಂಧೇಕರ್. ಮತ್ತು ಪ್ರಧಾನ ಕಾರ್ಯದರ್ಶಿ ಸುಭಾಷ್ ಅಣದೂರ. ಬಸವಕಲ್ಯಾಣ ತಾಲೂಕಾಧ್ಯಕ್ಷ ರಾಚಪ್ಪ ಮಂಠಾಳ. ಮತ್ತು ರಾಮಲಿಂಗ ಹಡಪದ. ದತ್ತಾತ್ರೇಯ ಮೂಲಗೆ. ಪಾಂಡುರಂಗ ಗದಲೆಗಾಂವ್. ಜಗದೀಶ್ ನೆಲವಾಡಕರ್. ರಾಮಣ್ಣ ಹಡಪದ. ಉದಯಕುಮಾರ್ ರಾಜೇಶ್ವರ. ದಯಾನಂದ ಹಡಪದ ಬಗದುರಿ, ಅಂಬ್ರುತ್ ಹಡಪದ ಮುಡಬಿ. ಚಿದಾನಂದ ಹಡಪದ ಮಂಠಾಳ. ಶಾಂತಕುಮಾರ ಹಡಪದ ಹಿರೇನಾಗಾವಿ. ಬೀದರ ಜಿಲ್ಲೆಯ ಹಿರಿಯ ಸಮಾಜದ ಮುಖಂಡರು ಶರಣಪ್ಪ ಚಂದನಹಳ್ಳಿ. ಪ್ರಭುರಾವ್ ತರನಹಳ್ಳಿ. ಹಣಮಂತ ಹುಣಜಿ. ವೈಜನಾಥ ತಾಳಮಂಡಗಿ .ಶರಣು ತಂಡೋಳಾ. ಮತ್ತು ಇದೇ ಸಮಯದಲ್ಲಿ ಕಲಬುರಗಿ ಜಿಲ್ಲಾಧ್ಯಕ್ಷರು ಈರಣ್ಣ ಸಿ ಹಡಪದ ಸಣ್ಣೂರ ಬಸವರಾಜ ಹಡಪದ ಸುಗೂರ ಎನ್.ಮತ್ತು ರಮೇಶ್ ಹಡಪದ ನೀಲೂರ.

ಭಗವಂತ ಹಡಪದ ಹೊನ್ನಕಿರಣಗಿ. ರುದ್ರಮಣಿ ಅಪ್ಪಣ್ಣ ಬಟಗೇರಾ. ಮಲ್ಲಿಕಾರ್ಜುನ ಹಡಪದ ಸಾವಳಗಿ. ತಿಪ್ಪಣ ಹಡಪದ ನರಿಬೋಳ. ಬಸವರಾಜ ಹಡಪದ ಹಳ್ಳಿ ಶಹಾಬಾದ, ಚಂದ್ರಶೇಖರ ಹಡಪದ ತೊನಸನಹಳ್ಳಿ. ಹಾಗೂ ರಾಜಕುಮಾರ ಹಡಪದ ಚಿಟ್ಟಗುಪ್ಪಾ. ವೀರಭದ್ರಪ್ಪ ಹಡಪದ ಹುಮನಾಬಾದ. ಸೇರಿದಂತೆ ಕ.ಜಿಲ್ಲಾ ಸಂ.ಕಾರ್ಯದರ್ಶಿ ಮಲ್ಲಿಕಾರ್ಜುನ ಬಿ ಹಡಪದ ಸುಗೂರ ಎನ್ ಸಮಾಜದ ಸೇವಕರು ಉಪಸ್ಥಿತರಿದ್ದರು ಎಂದು ವರದಿ ಯಾಗಿದೆ.

## ಒಂದೇ ವೇದಿಕೆಯಲ್ಲಿ ಇಬ್ಬರು ಮಹಾನಾಯಕರ ಸ್ಮರಣೆ: ಏಪ್ರಿಲ್ 14ರಂದು ಅಂಬೇಡ್ಕರ್ ಜಗಜೀವನರಾಮ್ ಜಯಂತಿ ಭವ್ಯ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಏ,6:–ತಾಲೂಕಿನಲ್ಲಿ ಸಮಾಜದ ಮಹಾನ್ ನಾಯಕರಾದ ಡಾಕ್ಟರ್,ಬಿ.ಆರ್. ಅಂಬೇಡ್ಕರ್ ಹಾಗೂ ಡಾಕ್ಟರ್,ಬಾಬು ಜಗಜೀವನ ರಾಮ್ ಅವರ ಜಯಂತಿಯನ್ನು ಇದೇ ಏಪ್ರಿಲ್ 14,ರಂದು ಒಟ್ಟಿಗೆ ಆಚರಿಸಲು ನಿರ್ಧರಿಸಲಾಗಿದೆ.ಈ ಕು–ರಿತು ಸೋಮವಾರ ಬೆಳಿಗ್ಗೆ ಮಸ್ಕಿಯ ತಹಶಿಲ್ ಕಾರ್ಯಾಲಯದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.**

ಸಭೆಯಲ್ಲಿ ತಹಶೀಲ್ದಾರ್ ಮಂಜುನಾಥ ಭೋಗಾವತಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ



ಯಾದವ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ರವೀಂದ್ರ ಉಪ್ಪಾರ ಹಾಗೂ ತಾಲ್ಲೂಕು ಮಟ್ಟದ ವಿವಿಧ ಅಧಿಕಾ–ರಿಗಳು,ಊರಿನ ಮುಖಂಡರು,ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ, ಏಪ್ರಿಲ್ 14ರಂದು ಬೆಳಿಗ್ಗೆ 8 ಗಂಟೆಗೆ ಗಾಂಧಿನಗರದ ಡಾಕ್ಟರ್,ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಭವ್ಯ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ.ಎರಡು ಕಲಾ ತಂಡಗಳೊಂದಿಗೆ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಅಂತಿಮವಾಗಿ ಭ್ರಮರಾಂಬ ದೇವಸ್ಥಾನಕ್ಕೆ ತಲುಪಲಿದೆ.

ದೇವಸ್ಥಾನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದ್ದು, ಹಿರಿಯ ಹೋರಾಟಗಾರ ಆರ್.ಮಾನಸಯ್ಯ ಅವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವೂ ನಡೆಯಲಿದೆ. ಈ ಸಂಯುಕ್ತ ಆಚರಣೆ ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಸೇವೆಯ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಹತ್ವಪೂರ್ಣ ಹೆಜ್ಜೆಯಾಗಿದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

# ಜಾಲಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯದ ಮುಂದೆ ಧರಣಿ ಸತ್ಯಾಗ್ರಹ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯದ ಮುಂದೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (ಗ್ರಾಮ ಘಟಕ, ಜಾಲಹಳ್ಳಿ) ಹಾಗೂ ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟ (ಹೋಬಳಿ ಘಟಕ, ಜಾಲಹಳ್ಳಿ) ವತಿಯಿಂದ ಧರಣಿ ಸತ್ಯಾಗ್ರಹ ನಡೆಸಲಾಯಿತು.**

ಇಂದು ದಿನಾಂಕ 06–04–2026 (ಸೋಮವಾರ) ಬೆಳಗ್ಗೆ, ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಈ ಪ್ರತಿಭಟನೆ ಜರುಗಿತು. ಈ ಸಂದರ್ಭದಲ್ಲಿ ಮುಖಂಡರಾದ ಎಲ್ಲಪ್ಪ ಮಾತನಾಡಿ, ಜಾಲಹಳ್ಳಿ ಗ್ರಾಮದ ಸರ್ವೇ ನಂ.117ರ ಸರ್ಕಾರಿ ಜಾಗದಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿದರು.




ಈಗಿರುವ ಪರಿಸ್ಥಿತಿಯಿಂದ ವಾರ್ಡ್ ನಂ. 1, 2, 3ರ ನಿವಾಸಿಗಳಿಗೆ, ವಿಶೇಷವಾಗಿ ಮಹಿಳೆಯರಿಗೆ ತೀವ್ರ ತೊಂದರೆ ಆಗುತ್ತಿದ್ದು, ಇದರಿಂದ ಜನರಲ್ಲಿ ಆಕ್ರೋಶ ಉಂಟಾಗಿದೆ ಎಂದು ತಿಳಿಸಿದರು. ಜೊತೆಗೆ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ಪ್ರಾರಂಭವಾಗಿಲ್ಲವೆಂದು ಆರೋಪಿಸಿದರು. ಇದೇ ವೇಳೆ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಸಂಗಮೇಶ್ ಮೂಲಿಮನಿ ಮಾತನಾಡಿ, ಜಾಲಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಳೆದ ಹಲವು ವರ್ಷಗಳಿಂದ 15ನೇ ಹಣ–ಕಾಸು ಯೋಜನೆಯಡಿ ವಿಕಲಚೇತನರ ಅಭಿವೃದ್ಧಿಗೆ ಮೀಸಲಾದ 5% ಅನುದಾನವನ್ನು ಬಳಸದೇ ಇರುವುದನ್ನು ಖಂಡಿಸಿದರು.

ಈ ಕುರಿತು ಗ್ರಾಮ ಪಂಚಾಯತ್‌ಗೆ 150ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಾಗೂ ಸರ್ವೇ ನಂ.117ರಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣದ ಕುರಿತು ಹಲವು ಬಾರಿ ಮನವಿ ಸಲ್ಲಿಸಿದ್ದರೂ ಅಧಿಕಾರಿಗಳು ವಿಳಂಬ ಧೋರಣೆ ತೋರಿದ್ದಾರೆ. ಇದರಿಂದ ವಾರ್ಡ್ ನಿವಾಸಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಹೇಳಿದರು. ಬೇಡಿಕೆಗಳನ್ನು ಲಿಖಿತ ರೂಪದಲ್ಲಿ ಈಡೇ–ರಿಸುವ ಭರವಸೆ ಸಿಗುವವರೆಗೆ ಧರಣಿ ಹಿಂಪಡೆಯುವುದಿಲ್ಲವೆಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ನಂತರ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಅಭಿವೃದ್ಧಿ ಅಧಿಕಾರಿಗಳು ಭೇಟಿ ನೀಡಿದರು. ಅಧಿಕಾರಿಗಳು ಎಲ್ಲಾ ಬೇಡಿಕೆಗಳನ್ನು ಈಡೇ–ರಿಸುವುದಾಗಿ ಲಿಖಿತ ಭರವಸೆ ನೀಡಿದ ನಂತರ, ಧರಣಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲಾಯಿತು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದವರು: ಸಂಗಮೇಶ್ ಮೂಲಿಮನಿ, ಲಿಂಗಣ್ಣ ನಾಯಕ ಮಕಾಶಿ, ಶರಣಪ್ಪ ಕಾರಲಕುಂಟಿ, ಸುರೇಶ್ ಗೌಡ ಹಂಪರಗುಂದಿ, ತಮ್ಮಣ್ಣ, ಯಲ್ಲಪ್ಪ ಗಚ್ಚಿನಮನಿ, ನರಸಪ್ಪ ಪನ್ನೂರಗೌಡ, ನರೇಶ್ ಕುರುಕುಂದಿ, ಭಾಗಮ್ಮ, ಶಾಂತಮ್ಮ, ಬೀಮರಾಯ ಮಕಾಶಿ, ಶಿವರಾಜ ಬಿದರಾಣಿ, ಬಸವರಾಜ ಗೋಪಳಾಪುರ, ಅಂಬಯ್ಯ ರಾಂಪಳ್ಳಿ, ಬಸವರಾಜ ನಾಗಮ್ಮ, ಸುಮಂಗಲ ಸೌದ್ರಿ, ಸಂಗಮ್ಮ ಸೇರಿದಂತೆ ಹಲವರು ಭಾಗವಹಿಸಿದ್ದರು. ಧರಣಿ ವೇಳೆ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಒದಗಿಸಲಾಗಿತ್ತು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಶಿಕ್ಷಣ ಮಾರ್ಗದರ್ಶಿ ವಿಶೇಷ

# ಮೆರೈನ್ ಇಂಜಿನಿಯರಿಂಗ್

ಮೆರೈನ್ ಇಂಜಿನಿಯರಿಂಗ್ (Marine Engineering) ಹಡಗುಗಳು, ಜಲಾಂತರ್ಗಾಮಿಗಳು ಮತ್ತು ಆಫ್‌ಶೋರ್ ರಚನೆಗಳ ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯನ್ನು ಒಳಗೊಂಡಿರುವ ಒಂದು ವಿಶೇಷ ಕ್ಷೇತ್ರವಾಗಿದೆ. 12ನೇ ತರಗತಿಯಲ್ಲಿ (PCM - ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ) ಉತ್ತೀರ್ಣರಾದವರು ಈ ಕೋರ್ಸ್ ಪಡೆಯಬಹುದು. ಪ್ರಮುಖ ಕೋರ್ಸ್‌ಗಳು: B.Tech, Diploma (DME), ಮತ್ತು ಉಒಇ.. ಮೆರೈನ್ ಇಂಜಿನಿಯರಿಂಗ್ ಕೋರ್ಸ್ ವಿವರಗಳು: ಕೋರ್ಸ್ ಮಟ್ಟಗಳು: ಬಿ.ಟೆಕ್ (B.Tech) – ಮೆರೈನ್ ಇಂಜಿನಿಯರಿಂಗ್: 4 ವರ್ಷಗಳ ಪದವಿ ಕೋರ್ಸ್. ಡಿಪ್ಲೊಮಾ ಇನ್ ಮೆರೈನ್ ಇಂಜಿನಿಯರಿಂಗ್ (DME): 2 ವರ್ಷಗಳ ಡಿಪ್ಲೊಮಾ ಕೋರ್ಸ್. ಗ್ರಾಜುಯೇಟ್ ಮೆರೈನ್ ಇಂಜಿನಿಯರಿಂಗ್ (GME): ಮೆಕ್ಯಾನಿಕಲ್ ಇಂಜಿನಿಯರಿಂಗ್ ಮುಗಿಸಿದವರಿಗೆ 1 ವರ್ಷದ ಕೋರ್ಸ್. ಅರ್ಹತೆ: 10+2 (PCM) ನಲ್ಲಿ ಕನಿಷ್ಠ 60% ಅಂಕಗಳು. ಇಂಗ್ಲಿಷ್‌ನಲ್ಲಿ ಕನಿಷ್ಠ 50% ಅಂಕಗಳು. ವಯೋಮಿತಿ: ಸಾಮಾನ್ಯವಾಗಿ 25 ವರ್ಷದೊಳಗಿರಬೇಕು. ದೈಹಿಕ ಸಾಮರ್ಥ್ಯ: ವೈದ್ಯಕೀಯವಾಗಿ ಸದೃಢರಾಗಿರಬೇಕು (ನೋಡಿ: ICMI ACADEMY ). ಪ್ರವೇಶ ಪರೀಕ್ಷೆಗಳು: IMU-CET, IIT-JEE (Advanced). ಪಠ್ಯಕ್ರಮ: ಹಡಗು ನಿರ್ಮಾಣ, ಸಾಗರ ಯಂತ್ರೋಪಕರಣಗಳು, ನೌಕಾ ವಾಸ್ತುಶಿಲ್ಪ (Naval Architecture), ಮೆರೈನ್ ಬಾಯ್ಲರ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್. ಉದ್ಯೋಗಾವಕಾಶಗಳು: ಮರ್ಚೆಂಟ್ ನೌಕಾಪಡೆ (Merchant Navy) – ಜೂನಿಯರ್ ಇಂಜಿನಿಯರ್, ಫೋರ್ತ್ ಇಂಜಿನಿಯರ್. ಹಡಗು ನಿರ್ಮಾಣ ಕಂಪನಿಗಳು (Shipyards). ಡಾಕ್‌ಯಾರ್ಡ್‌ಗಳು. ಕೋಸ್ಟ್ ಗಾರ್ಡ್. ಪ್ರಮುಖ ಕಾಲೇಜುಗಳು: ಇಂಡಿಯನ್ ಮ್ಯಾರಿಟೈಮ್ ಯೂನಿವರ್ಸಿಟಿ (IMU), ಕಲ್ಕತ್ತಾ/ಮುಂಬೈ/ಚೆನ್ನೈ. KM ಸ್ಕೂಲ್ ಆಫ್ ಮೆರೈನ್ ಇಂಜಿನಿಯರಿಂಗ್. ICMI Academy, ಕೊಚ್ಚಿ (ಕೋರ್ಸ್

# ಮುದ್ದೇಬಿಹಾಳದಲ್ಲಿ ಅಂಬೇಡ್ಕರ ಹಬ್ಬ ಅದ್ದೂರಿ ಕಾರ್ಯಕ್ರಮಗಳ ಆಯೋಜನೆ

❑ ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ವಿಶ್ವರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತೋತ್ಸವದ ಅಂಗವಾಗಿ ಮುದ್ದೇಬಿಹಾಳ ಪಟ್ಟಣದಲ್ಲಿ ವಿವಿಧ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸೇವಾ ಕಾರ್ಯಕ್ರಮಗಳನ್ನು ಒಳಗೊಂಡ ಭವ್ಯ ಆಚರಣೆಗೆ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಲಾಗಿದೆ.**



ಈ ಸಂಬಂಧ ಆಯೋಜಕರು ಕಾರ್ಯಕ್ರಮಗಳ ವಿವರಗಳನ್ನು ಪ್ರಕಟಿಸಿದ್ದು, ಏಪ್ರಿಲ್ 14, 2026 ಮಂಗಳವಾರದಂದು ದಿನಪೂರ್ತಿ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮವು ಬೆಳಿಗ್ಗೆ 7:00 ಗಂಟೆಗೆ ಅಂಬೇಡ್ಕರ್ ಅವರ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಆರಂಭವಾಗಲಿದೆ. ಸಮಾಜದ ಎಲ್ಲ ವರ್ಗದ ಜನರು, ಮುಖಂಡರು ಹಾಗೂ ಅಭಿಮಾನಿಗಳು ಭಾಗವಹಿಸಿ ಗೌರವ ಸಲ್ಲಿಸಲಿದ್ದಾರೆ. ಬಳಿಕ ಬೆಳಿಗ್ಗೆ 9:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ಪುರಸಭೆ ಎದುರು ಪ್ರೀತಿಯ ಭೋಜನವನ್ನು ಏರ್ಪಡಿಸಲಾಗಿದ್ದು, ಸಾವಿರಾರು ಜನರು ಭಾಗವಹಿಸುವ ನಿರೀಕ್ಷೆಯಿದೆ.

ಮಧ್ಯಾಹ್ನ 4:30 ಗಂಟೆಗೆ ನೇತಾಜಿ ನಗರದಿಂದ ಪ್ರಾರಂಭವಾಗುವ ಭವ್ಯ ಮೆರವಣಿಗೆ ವಿಶೇಷ ಆಕರ್ಷಣೆಯಾಗಲಿದೆ. ದ್ಯಾಮವ್ವನ ಗುಡಿ ಮೂಲಕ ಬಸವೇಶ್ವರ ಸರ್ಕಲ್ ಹಾಗೂ ಅಂಬೇಡ್ಕರ್ ಸರ್ಕಲ್‌ವರೆಗೆ ಸಾಗುವ ಈ ಮೆರವಣಿಗೆಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ಜನರು ಉತ್ಸಾಹದಿಂದ ಭಾಗವಹಿಸಲಿದ್ದಾರೆ. ಡೊಳ್ಳು, ಕಲಾ ತಂಡಗಳು ಹಾಗೂ ವಿವಿಧ ಘೋಷಣೆಗಳ ಮೂಲಕ ಮೆರವಣಿಗೆಗೆ ಹಬ್ಬದ ಮೆರಗು ಸೇರ್ಪಡೆಯಾಗಲಿದೆ. ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಸರ್ಕಲ್‌ನಲ್ಲಿ ಅನುಗ್ರಹ ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಕಣ್ಣಿನ ಪರೀಕ್ಷೆ, ಹೃದಯ ಸಂಬಂಧಿತ ತಪಾಸಣೆ, ರಕ್ತ ಪರೀಕ್ಷೆ ಸೇರಿದಂತೆ ವಿವಿಧ ಆರೋಗ್ಯ ಸೇವೆಗಳು ಜನರಿಗೆ ಉಚಿತವಾಗಿ ಲಭ್ಯವಾಗಲಿದ್ದು, ಸಾರ್ವಜನಿಕ ಆರೋಗ್ಯ ಜಾಗೃತಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ.


ರಾತ್ರಿ 8:00 ಗಂಟೆಗೆ ನಡೆಯುವ ಸನ್ಮಾನ ಸಮಾರಂಭದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಹಾಗೂ ಸಮಾಜದಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಗೌರವಿಸಲಾಗುವುದು. ವಿದ್ಯಾರ್ಥಿಗಳ ಸಾಧನೆಯನ್ನು ಪ್ರೋತ್ಸಾಹಿಸುವ ಜೊತೆಗೆ, ಸಮಾಜ ಸೇವಕರನ್ನು ಗುರುತಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಒಟ್ಟಾರೆ, ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವಗಳನ್ನು ಸ್ಮರಿಸುವ ಹಾಗೂ ಸಮಾಜದಲ್ಲಿ ಸಮಾನತೆ, ಶಿಕ್ಷಣ ಮತ್ತು ನ್ಯಾಯದ ಮೌಲ್ಯಗಳನ್ನು ಬಲಪಡಿಸುವ ಉದ್ದೇಶದಿಂದ ಈ ಜಯಂತೋತ್ಸವವನ್ನು ಅರ್ಥಪೂರ್ಣವಾಗಿ ಆಚ–'ರಿಸಲು ಮುದ್ದೇಬಿಹಾಳದಲ್ಲಿ ನೇತಾಜಿ ನಗರದ ಯುವಕರಿಂದ ಸಕಲ ಸಿದ್ಧತೆಗಳು ನಡೆದಿವೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಆಯೋಜಕರು ಮನವಿ ಮಾಡಿದ್ದಾರೆ.ಈ ಸಂಧರ್ಭದಲ್ಲಿ ಶ್ರೀಕಾಂತ ಚಲವಾದಿ, ಹ–ರೀಶ ನಾಟಿಕಾರ, ಸಿ ಜೆ ವಿಜಯಕರ, ವೈ ಎಚ್ ವಿಜಯಕರ ಶಿವು ಶಿವಪೂರ, ಪ್ರಕಾಶ ಮಂಜುನಾಥ ಗುಂಡಕರ್ಜಗಿ, ವಿಕ್ರಮ ಮುದ್ದೇಬಿಹಾಳ, ಜಗದೀಶ ಕಟ್ಟಿಮನಿ, ಅಂಬರೇಶ ಹಂಗರಗಿ, ರಾಜು ದೊಡಮನಿ, ಪ್ರಕಾಶ ಸರೂರ, ದೇವರಾಜ ಹಂಗರಗಿ,ಮಾಹಾಂತೇಶ ಚಲವಾದಿ, ಸಂತೋಷ ಅಜಮನಿ, ಪ್ರಶಾಂತ ಕಾಳೆ, ಯಲ್ಲಪ್ಪ ಚಲವಾದಿ, ಶಂಕರ್ ಅಜಮನಿ, ಜಟ್ಟೆಪ್ಪ ಅಜಮನಿ,

# ತಾಲೂಕಾಡಳಿತದಿಂದ ಸಾಹಿತಿ ಮಡಿವಾಳಮ್ಮಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ ಆವರಣದಲ್ಲಿ ತಾಲೂಕು ಆಡಳಿತ, ತಾಲೂಕಾ ಪಂಚಾಯತ,ಸಮಾಜ ಕಲ್ಯಾಣ ಇಲಾಖೆ ಮುದ್ದೇಬಿಹಾಳ ಹಾಗೂ ಪುರಸಭೆ ತಾಳಿಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಶಿಕ್ಷಕಿ ಸಾಹಿತಿ ಮಡಿವಾಳಮ್ಮ ಎಸ್‌ಜಿ ನಾಡಗೌಡ ಇವರನ್ನು ತಾಲೂಕಾಡಳಿತದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**



ಕಾರ್ಯಕ್ರಮದಲ್ಲಿ ತಹಸಿಲ್ದಾರ್ ಗ್ರೇಡ್–2 ಪ್ರದೀಪ್ ದೇವಗಿರಿ, ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರಮಠ,ಇಓ ಅನಸೂಯಾ ಚಲವಾದಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಡಾ.ಶ್ರೀಶೈಲ ಹುಕ್ಕೇರಿ, ಸಮಾಜ ಕಲ್ಯಾಣ ಇಲಾಖೆಯ ಶಿವಲಿಂಗಪ್ಪ ಹಚಡದ,ಪಿ–ಎಸ್‌ಐ ಜ್ಯೋತಿ ಖೋತ, ಮಹೇಶ ಜೋಶಿ, ರಾಜು ವಿಜಾಪುರ, ಯಮನಪ್ಪ ಕಟ್ಟಿಮನಿ, ಬಸ್ಸು ಮಾದರ,ಸಂಜೀವಪ್ಪ ಬರದೇನಾಳ, ಆಸೀಫ ಕೆಂಭಾವಿ, ಮಹಮ್ಮದ್ ಶಫೀಕ್ ಇನಾಮದಾರ, ರಾಹುಲ್ ರಜಪೂತ,ಸಮಾಜ ಕಲ್ಯಾಣ ಇಲಾಖೆಯ ಮಹಾಂತೇಶ ತಾಳಿಕೋಟಿ,–ಎಸ್.ಎನ್. ಮಲ್ಲಾಡೆ,ಎನ್.ವಿ.ಕೋರಿ,ಎಸ್.ಎಂ. ಕಲಬುರ್ಗಿ ಇದ್ದರು.

# ಗ್ರಾಮೀಣ ಪ್ರತಿಭೆಗಳಿಗೆ ಹೊಸ ದಿಕ್ಕು ನೀಡಿದ 'ಅಹಿಲ್ಯಾದೇವಿ ಹೊಳ್ಕರ್ ಅವಾರ್ಡ್ ಎಕ್ಸಾಮ್', ಅಭ್ಯುದಯ ಕಾಲೇಜಿನ ಶ್ಲಾಘನೀಯ ಪ್ರಯತ್ನ




❑ ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿರುವ ಅಪಾರ ಪ್ರತಿಭೆಯನ್ನು ಹೊರತರುವ ಉದ್ದೇಶದಿಂದ ಆಯೋಜಿಸಲಾದ "ಅಹಿಲ್ಯಾದೇವಿ ಹೊಳ್ಕರ್ ಅವಾರ್ಡ್ ಎಕ್ಸಾಮ್ 2026" ಯಶಸ್ವಿಯಾಗಿ ನೆರವೇರಿದ್ದು, ವಿದ್ಯಾರ್ಥಿಗಳಿಂದ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪಟ್ಟಣದ ಪ್ರತಿಷ್ಠಿತ ಅಭ್ಯುದಯ ಪಿಯು ಸೈನ್ಸ್ ಮತ್ತು ಕಾಮರ್ಸ್ ಕಾಲೇಜಿನ ಆಶ್ರಯದಲ್ಲಿ ನಡೆದ ಈ ಪ್ರತಿಭಾ ಪರೀಕ್ಷೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳ ದಾರಿಯನ್ನು ತೆರೆದಿದೆ.**

ಕಾರ್ಯಕ್ರಮದಲ್ಲಿ ಅಹಿಲ್ಯಾಬಾಯಿ ಹೊಳ್ಕರ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ ಎನ್. ಮದರಿ ಮಾತನಾಡಿ "ಆರ್ಥಿಕ ಅಡಚಣೆಗಳಿಂದ ಹಲವಾರು ಪ್ರತಿಭೆಗಳು ಮಂಕಾಗುತ್ತಿವೆ. ಅಂತಹ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದು ನಮ್ಮ ಸಂಸ್ಥೆಯ ಪ್ರಮುಖ ಗು–ರಿಯಾಗಿದೆ. ಈ ಪರೀಕ್ಷೆಗಳು ಕೇವಲ ಸ್ಪರ್ಧಾತ್ಮಕ ಮನೋಭಾವವನ್ನೇ ಬೆಳೆಸುವುದಲ್ಲ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ, ಅಭ್ಯುದಯ ಸಂಸ್ಥೆ ಈ ಹಿಂದಿನಿಂದಲೂ ಬಡ ವಿದ್ಯಾರ್ಥಿಗಳ ಉನ್ನತೀಕರಣಕ್ಕಾಗಿ ಉಚಿತ ಶಿಕ್ಷಣ ನೀಡುತ್ತ ಬಂದಿದೆ. ಇಂದು ಸಹ ಅದೇ ಸಾಮಾಜಿಕ ಬದ್ಧತೆಯನ್ನು ಮುಂದುವರೆಸುತ್ತಿದ್ದು, ನಮ್ಮ ಕಾರ್ಯಚಟುವಟಿಕೆಗಳನ್ನು ನೋಡಿ ಇತರರು ಸಹ ಅನುಸರಿಸುತ್ತಿರುವುದು ಸಂತೋಷಕರ ಸಂಗತಿ," ಎಂದು ತಿಳಿಸಿದರು.

ಭಾನುವಾರ ಬೆಳಿಗ್ಗೆ 11:30ಕ್ಕೆ ಕಾಲೇಜು ಆವರಣದಲ್ಲಿ ನಡೆದ ಈ ಪರೀಕ್ಷೆಗೆ ತಾಲೂಕು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪರೀಕ್ಷೆಯನ್ನು ಶಿಸ್ತಿನಿಂದ ಹಾಗೂ ಪಾರದರ್ಶಕವಾಗಿ ನಡೆಸಲು ಸಮರ್ಪಕ ವ್ಯವಸ್ಥೆ ಕಲ್ಪಿಸಲಾಗಿತ್ತು. ಪರೀಕ್ಷೆಯಲ್ಲಿ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವ್ಯಾಕರಣ ವಿಷಯಗಳಿಂದ ಒಟ್ಟು 60 ಪ್ರಶ್ನೆಗಳು ಕೇಳಲಾಗಿದ್ದು, 60 ನಿಮಿಷಗಳ ಅವಧಿಯಲ್ಲಿ ವಿದ್ಯಾರ್ಥಿಗಳು ಉತ್ತ–ರಿಸಿದರು. ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳಲ್ಲಿ ಉತ್ತಮ ಸ್ಪರ್ಧಾತ್ಮಕ ಮನೋಭಾವ ಕಂಡುಬಂದಿತು. ಈ ಪ್ರತಿಭಾ ಪರೀಕ್ಷೆಯ ಪ್ರಮುಖ ಆಕರ್ಷಣೆ ಎಂದರೆ, ವಿಜೇತರಾಗುವ ವಿದ್ಯಾರ್ಥಿಗಳಿಗೆ ಒಟ್ಟು ?22.72 ಲಕ್ಷ ನಗದು ಬಹುಮಾನ ಹಾಗೂ ಶಿಷ್ಯವೇತನ ನೀಡಲಾಗುವುದು. ಜೊತೆಗೆ, ಮೊದಲ 15 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎರಡು ವರ್ಷಗಳ ಕಾಲ ಸಂಪೂರ್ಣ ಉಚಿತ ಶಿಕ್ಷಣ ನೀಡುವ ವಿಶೇಷ ಯೋಜನೆಯನ್ನು ಸಂಸ್ಥೆ ಘೋಷಿಸಿತ್ತು.

## ಫಲಿತಾಂಶದಲ್ಲಿ ಮೆರೆದ ಪ್ರತಿಭೆಗಳು:.

**ಈ ಪರೀಕ್ಷೆಯಲ್ಲಿ ಮೈಮುನ್ನಾ ಮುದ್ನಾಳ (356 ಅಂಕ) ಪ್ರಥಮ ಸ್ಥಾನ ಪಡೆದು ಗಮನಸೆಳೆದಿದ್ದಾರೆ. ಗಂಗಮ್ಮ ಕೊಳೂರು ದ್ವಿತೀಯ ಸ್ಥಾನ ಮತ್ತು ತನೂಶ್ರೀ ವಾಲೀಕಾರ ತೃತೀಯ ಸ್ಥಾನ ಗಳಿಸಿದ್ದಾರೆ. ಚಂದ್ರು ಚಾಲವಾಡಿ, ಶ್ರೀನಿವಾಸ್ ಕಟ್ಟಿಮನಿ, ಸಮರ್ಥ್ ಬಾಗೇವಾಡಿ ಸೇರಿದಂತೆ ಇತರ ವಿದ್ಯಾರ್ಥಿಗಳೂ ಉತ್ತಮ ಸಾಧನೆ ಮಾಡಿ ಉಚಿತ ಶಿಕ್ಷಣದ ಅವಕಾಶವನ್ನು ಪಡೆದುಕೊಂಡಿದ್ದಾರೆ. ಒಟ್ಟಾರೆ, ಈ ಪರೀಕ್ಷೆ ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ, ಅವರ ಪ್ರತಿಭೆಯನ್ನು ಹೊರತರುವ ವೇದಿಕೆಯಾಗಿದ್ದು, ಅಭ್ಯುದಯ ಕಾಲೇಜಿನ ಈ ಸಾಮಾಜಿಕ ಬದ್ಧತೆ ಶ್ಲಾಘನೀಯವಾಗಿದೆ. ಇಂತಹ ಕಾರ್ಯಕ್ರಮಗಳು ಮುಂದುವರಿದರೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಭವಿಷ್ಯ ಇನ್ನಷ್ಟು ಉಜ್ವಲವಾಗಲಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.**

# ಬಳಗಾನೂರು ಮಾರುತಿ ದೇವಾಲಯ ಹುಂಡಿ ಓಪನ್! ?2.21 ಲಕ್ಷ ಕಾಣಿಕೆ ಭಕ್ತರ ಭಕ್ತಿ ಹೊಳೆ

❑ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಮಸ್ಕಿ ತಾಲೂಕು ಬಳಗಾನೂರು ಪಟ್ಟಣದ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ಪ್ರಸಿದ್ಧ ಮಾರುತಿ ದೇವಸ್ಥಾನದಲ್ಲಿ ಸೋಮವಾರ ಬೆಳಿಗ್ಗೆ ಹುಂಡಿ ತೆರೆಯುವ ಕಾರ್ಯ ಭಕ್ತರ ಗಮನ ಸೆಳೆಯಿತು.**

ತಹಸಿಲ್ದಾರ್ ಮಂಜುನಾಥ ಬೋಗಾವತಿ, ಬಳಗಾನೂರು ನಾಡ ಕಾರ್ಯಾಲಯದ ಉಪತಹಸಿಲ್ದಾರ್ ನಾಗಲಿಂಗ ಪತ್ತಾರ್, ಗ್ರಾಮ ಲೆಕ್ಕಿಗ ಅಮರೇಶ ನಾಯ್ಕ ಹಾಗೂ



ಸಿಬ್ಬಂದಿ ವರ್ಗದವರ ಸಮ್ಮುಖದಲ್ಲಿ ಹುಂಡಿ–ಯನ್ನು ಅಧಿಕೃತವಾಗಿ ತೆರೆಯಲಾಯಿತು. ಹುಂಡಿಯಲ್ಲಿ ಸಂಗ್ರಹವಾಗಿದ್ದ ಕಾಣಿಕೆಯನ್ನು



ಎಣಿಸಿದಾಗ ಒಟ್ಟು ?2,21,740 ರೂಪಾಯಿಗಳ ಸಂಗ್ರಹವಾಗಿರುವುದಾಗಿ ತಹಸಿಲ್ದಾರ್ ಘೋಷಿಸಿದರು.


ಈ ಮೊತ್ತವು ಭಕ್ತರ ಅಪಾರ ಭಕ್ತಿ ಮತ್ತು ನಂಬಿಕೆಗೆ ಸಾಕ್ಷಿಯಾಗಿದೆ. ದಿನದಿಂದ ದಿನಕ್ಕೆ ದೇವಸ್ಥಾನದ ಮೇಲಿನ ಭಕ್ತರ ವಿಶ್ವಾಸ ಹೆಚ್ಚುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ.ಸ್ಥಳೀಯರು ಹಾಗೂ ಭಕ್ತರು ಈ ಸಂದರ್ಭವನ್ನು ಸಾಕ್ಷಿಯಾಗಿ ನೋಡಿದ್ದು, ಮಾರುತಿ ದೇವರ ಆಶೀರ್ವಾದ ಸದಾ ಇರುತ್ತದೆ ಎಂಬ ನಂಬಿಕೆಯನ್ನು ವ್ಯಕ್ತಪಡಿಸಿದರು. ವರದಿ, ಸುರೇಶ ಬಳಗಾನೂರು.

# ಸಂಪಾದಕ ಬಸವರಾಜಸ್ವಾಮಿಯವರ ಬಸವಗೀತೆ ಸತ್ಯಸಂವಾದ 9 ಸಂಪುಟಗಳ ಗುಚ್ಛ ಲೋಕಾರ್ಪಣೆ..

## ಅಂತರಂಗದ ಅವಲೋಕನ ಮಾಡಿಕೊಳ್ಳುವಲ್ಲಿ ಬಸವ ಗೀತೆ ಪರಿಣಾಮಕಾರಿ: ಡಾ.ಖಾದರಭಾಷಾ ಅಭಿಮತ

❑ ನೈಜ್ಯ ದೆಸೆ ನ್ಯೂಸ್

**ಕನ್ನಡ ಸಾಹಿತ್ಯದಲ್ಲಿ ವರ್ತಮಾನದ ಕೆಲವೇ ಕೆಲವು ಪುಸ್ತಕಗಳು ದಾಖಲಾಗಿವೆ. ಅದರಲ್ಲಿ ಬಸವಗೀತೆ ವಚನ ಸಂಪುಟವು ಕೂಡ ಒಂದು ಎಂಬುದು ಹೆಮ್ಮೆಯ ವಿಚಾರವಾಗಿದೆ. ಹಿರಿಯ ಪತ್ರಕರ್ತರು ಹಾಗೂ ಸಂಪಾದಕರಾದ ಬಸವರಾಜಸ್ವಾಮಿಯವರು ಈ ಕೃತಿಯಲ್ಲಿ ಅಂತರಂಗದ ಅವಲೋಕನ ಮಾಡಿ ಕೊಳ್ಳಲು ಪರಿಣಾಮಕಾರಿಯಾಗಿ ವಚನಗಳನ್ನು ವಿಮರ್ಶೆ ಮಾಡಿದ್ದಾರೆ ಎಂದು ತುರ್ವಿಹಾಳ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಖಾದರ್ ಭಾಷಾ ಅಭಿಪ್ರಾಯ ಪಟ್ಟರು.**



ನಗರದ ಸರ್ಕಾರಿ ನೌಕರರ ಭವನದಲ್ಲಿ ಭಾನುವಾರ ಕನ್ನಡ ಸಾಹಿತ್ಯ ಪರಿಷತ್ತು, ಬಸವಕೇಂದ್ರ, ಬಸವಪರ, ಸಂಘಟನೆಗಳ ಸಂಂ–ಯುಕ್ತಾಶ್ರಯದಲ್ಲಿ ಸುದ್ದಿಮೂಲ ಪತ್ರಿಕೆಯ ಸಂಪಾದಕ ಬಸವರಾಜಸ್ವಾಮಿ ಅವರ ಬಸವಗೀತೆ ವಚನ ಸಂಮಟ–9 ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೃತಿಯ ಕುರಿತು ಮಾತನಾಡುತ್ತಾ ಒಟ್ಟು ಒಂಬತ್ತು ಸಂಪುಟಗಳಲ್ಲಿ ಈ ಬಸವಗೀತೆ ಹೊರಬಂದಿದ್ದು, 959 ವಚನಗಳ ಸಂವಾದಗಳು ನೋಡಿದಾಗ, ಬಸವರಸ ಪುಸ್ತಕದಲ್ಲಿ ನಾಯಕನೋ? ಅಥವಾ ಬಸವಾನಂದ ಸ್ವಾಮಿಗಳು ಅಂದರೆ (ಬಸವರಾಜಸ್ವಾಮಿ) ನಾಯಕರೋ? ಎಂದು ಪ್ರಶ್ನಿಸಿದ ಅವರು, ಸ್ವಾಮಿಗಳು ತಮ್ಮ ಅನುಭವ ಜನ್ಯ ವಚನಗಳ ವಿಮರ್ಶೆಯನ್ನು ವರ್ತಮಾನದ ರಾಮಾಯಣ, ಮಹಾಭಾರತ, ಪೈಗಂಬರ್, ಕ್ರೈಸ್ತನ ಘಟನೆಗಳೊಂದಿಗೆ ಸಮೀಕರಿಸಿ ಬರೆದಿರುವುದು ವಿಶೇಷ ಈ ಕಾಲದ ಅನೇಕ ಸಾಹಿತಿಗಳು ಮುಖಾಮುಖಿಯಾಗಿ ಹೋಗುವುದು ಈ ಕೃತಿಯಲ್ಲಿ ಭಾಸವಾಗುತ್ತದೆ. ಬಸವಣ್ಣನವರ ವಚನಗಳನ್ನು ಸ್ವಾಮಿಗಳು ವೈಚಾರಿಕ ನೆಲೆಯಲ್ಲಿ ಬರೆದಿದ್ದಾರೆ. ಈ ಕೃತಿಯಲ್ಲಿ ಮೌಢ್ಯತೆಯನ್ನು ಎಚ್ಚರಿಸುವ ಅವರು ಕೃತಿಯೊಂದಕ್ಕೆ ಮುನ್ನುಡಿ ಬರೆದಿರುವುದು ಹೆಗ್ಗಳಿಕೆಯಾಗಿದೆ. ಅಲ್ಲದೇ ಸಾಹಿತಿ ಬಿ.ಜಿ.ಹುಲಿ ಅವರ ಮುನ್ನುಡಿಯು ಸಹ ಕಳಸಪ್ರಾಯವಾಗಿದೆ. ಇತಿಹಾಸ ತಿಳಿಯದವ ಇತಿಹಾಸ ಸೃಷ್ಟಿಸಲಾರ ಎಂಬುದು ಲೋಕೋಕ್ತಿ. 12ನೇ ಶತಮಾನದ ಬಸವಣ್ಣನವರ ಇತಿಹಾಸವೇ ಒಂದು ರೋಚಕ ಅವರು ಸಮಾಜದಲ್ಲಿನ ಕಂದಾಚಾರ, ಮೌಢ್ಯಗಳನ್ನು ತಮ್ಮ ಸರಳ ವಚನಗಳ ಮೂಲಕ ಭಿತ್ತಿ, ಜಗತ್ತನ್ನು ತಿದ್ದಲು ಮುಂದಾದಂತೆ ಬಸವರಾಜಸ್ವಾಮಿಯವರು ಸಹ ತಮ್ಮ ಕೃತಿಗಳಲ್ಲಿ ಸಂವಾದಗಳನ್ನು ಅರ್ಥಪೂರ್ಣವಾಗಿ ಹೆಣೆದಿದ್ದಾರೆ. ಇದರ ಜೊತೆಗೆ ಅಲ್ಲಲ್ಲಿ ಲೋಕದ ಡೊಂಕುಗಳನ್ನು ಸಹ ಕುಟುಕಿದ್ದಾರೆ ಎಂದು ವಿವರಿಸಿದರು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ, ಬಸವಗೀತೆ ವಚನ ಸಂಪುಟ ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾಜಿ ಸಂಸದರಾದ ಕೆ.ವಿರುಪಾಕ್ಷಪ್ಪ ಮಾತನಾಡಿ, ಬಸವರಾಜಸ್ವಾಮಿಯವರು ಸಂಪೂರ್ಣ ವಚನಗಳನ್ನು ಮೈಗೂಡಿಸಿಕೊಂಡು ಅಧ್ಯಯನಶೀಲರಾಗಿ, ಬಸವಣ್ಣ ಕುರಿತು ಪುಸ್ತಕಗಳನ್ನು ರಚಿಸಿ ಸಮಾಜಕೆ ಸಂದೇಶ ನೀಡುತಿದ್ದಾರೆ. ಬಸವತತ್ವ ಶತಮಾನ ಶೋಷಣೆ ಮಾಡುವ ವರ್ಗ, ಶೋಷಣೆ ಒಳಗಾಗುವ ವರ್ಗ ಇತ್ತು. ಅಹಂಕಾರ ಶೋಷಣೆ ಮಾಡಿದರೆ, ಕೀಳಿರಿಮೆ ಶೋಷಣೆಗೆ ಒಳಗಾಗುತ್ತದೆ. ಈ



ಎರಡನ್ನು ಹೋಗಲಾಡಿಸುವ ಕೆಲಸ ಅಂದಿನ ಕಾಲದಲ್ಲಿ ಬಸವಣ್ಣನವರು ಮಾಡಿದರು.

ಕನ್ನಡಕ್ಕೆ ಬಸವಣ್ಣನ ಕಾಲದಲ್ಲಿ ಹೆಚ್ಚಿನ ಪ್ರಾಧಾನ್ಯತೆ ಸಿಕ್ಕಿದೆ. ಬಸವಣ್ಣನ ವಿಚಾರದಲ್ಲಿ ಸ್ವತಂತ್ರ ಪ್ರತಿಪಾದನೆ ಸರಿ ಅಲ್ಲ. ಮನುಷ್ಯರೆಲ್ಲರೂ ಒಂದೇ ಎನ್ನುವ ತತ್ವ ಭಾವನೆಯನ್ನು ಬಸವಣ್ಣನವರು ಬಿತ್ತಿದರು. ಬಸವಣ್ಣನವರ ಹೋರಾಟದ ಫಲಿತಾಂಶ ಸಮಾಜದಲ್ಲಿ ಬೆಳವಣಿಗೆಯಾಗಬೇಕು. ಅಂದಾಗ ಮಾತ್ರ ಸಮಾಜ ಬದಲಾವಣೆ ಸಾಧ್ಯ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೃತಿಕಾರ ಬಸವರಾಜಸ್ವಾಮಿ ಮಾತನಾಡಿ, ಬಸವಗೀತೆಯನ್ನು ಬೆಂಗಳೂರಿನಲ್ಲಿ ಈ ಮೊದಲು ಬಿಡುಗಡೆ ಮಾಡಲಾಯಿತು. 21 ಪುಸ್ತಕಗಳು ಹೊರ ಬಂದರೂ ಸಹ ಬಿಡುಗಡೆಗೆ ಮಹತ್ವ ಕೊಡಲಿಲ್ಲ. ಆದರೆ ಬಸವಗೀತೆ ಮನೆ–ಮನದ ಗೀತೆಯಾಗಲಿ ಎಂಬ ಸದುದ್ದೇಶದಿಂದ ನಾಡಿನ ವಿವಿಧೆಡೆ ಈ ಕೃತಿಯನ್ನು ಓದಿದಾಗ ಅದರ ನೆನಪು ಆಪತ್ಕಾಲದಲ್ಲಿ ಬಂದರೆ ಪುಸ್ತಕ ಸಾರ್ಥಕವಾದಂತೆ ಎಂದರು. ದೇಹದ ವಿಚಾರಗಳೇ ಈ ಪುಸ್ತಕದಲ್ಲಿ ಅಡಕವಾಗಿವೆ. ಅರಿವು, ಸ್ಥೂಲ, ಹಾಗೂ ಮನೋಮಯ ದೇಹಗಳಿವೆ.

ಶರಣರಿಗೆ ಗಂಡು–ಹೆಣ್ಣು ಎನ್ನುವ ಬೇಧವಿಲ್ಲ. ಪ್ರತಿಯೊಬ್ಬರ ಮನಸ್ಸೇ ಹೆಣ್ಣು–ಅರಿವೇ ಗಂಡು. ಕಣ್ಣುಗಳು ಒಂದೇ ಆದರೂ ನೋಡುವ ರೀತಿ ಬೇರೆ ಇರುತ್ತದೆ. ಮನೋಮಯ ದೃಶ್ಯ, ಜ್ಞಾನಮಯ ದೃಶ್ಯ, ಮರಿವಿನ ದೃಶ್ಯ, ಅರಿವನ ದೃಶ್ಯ, ಹೀಗೆ ಅಜ್ಞಾನದಿಂದ ಸುಜ್ಞಾನದ ಕಡೆಗೆ ನೋಡುವುದೇ ಅರಿವಿನ ಆನಂದ ಅರಿವನ್ನು ಬಳಸಿಕೊಂಡವರು ಗುರುವಾದರು. ಮಹಾಜ್ಞಾನಿಗಳಾದರು. ತನುವಿನ ತತ್ವವೇ ಬಸವತತ್ವ ಅಂತರಂಗದ ತತ್ವ ಕೊಳೆಯಾಗದೇ ಶುದ್ಧಿ ಆಗಿರಬೇಕು. ಈ ಹಿನ್ನೆಲೆ ಬಸವಣ್ಣನವರ ವಚನಗಳನ್ನು ಕೃತಿಯಲ್ಲಿ ಸಂವಾದ ಮಾಡಲಾಗಿದೆ. ಪ್ರತಿಯೊಬ್ಬರು ಓದಿ, ಅಥ–'ೖಸಿಕೊಂಡು ಬದುಕಬೇಕು ಎಂದು ವಿಶ್ಲೇಷಿಸಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಪಿ.ರುದ್ರಪ್ಪ ಕುರಕುಂದಿ, ಚಿಂತಕ ಗೋವಿಂದರಾಜ ಬಾರಕೇರ್, ಚಂದ್ರೇಗೌಡ ಹರೇಟನೂರು, ಬಸಲಿಂಗಪ್ಪ ಬಾದರ್ಲಿ, ಡಾ.ಹುಸೇನಪ್ಪ ಅಮರಾಪುರ, ಶರಣಪ ಹೊಸಳ್ಳಿಕ್ಯಾಂಪ್, ರವಿಕುಮಾರ ಸಾಸಲಮರಿ, ವೀರೇಶ ಕನ್ನಾರಿ, ಪರಶುರಾಮ ಮಲ್ಲಾಪುರ ಬಸವಗೀತೆ 9 ಸಂಮಟಗಳ ಒಂದೊಂದು ವಚನ ಹಾಗೂ ಅದರ ಸಂವಾದ ಮಾಡಿದರು. ವೇದಿಕೆಯಲ್ಲಿ ಬಸವ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಕೆ.ಶರಣಪ್ಪತೆಂಗಿನಕಾಯಿ, ಕನ್ನಡಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಫ್.ಮಸ್ಕಿ, ಮಹಿಳಾ ಬಸವಕೇಂದ್ರದ ಅಧ್ಯಕ್ಷೆ ಸುಮಂಗಲಾ ಚಿಂಚಿರಕಿ, ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಹಿರೇಮಠ, ಸೇರಿ ಅನೇಕರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101